**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

# ತಪೋವಾಣಿ

ಸಂ. 7 ಸಂ. 8 ಆಗಸ್ಟ್ 2010 ರೂ.15

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**(ಅನು: ಶ್ಯಾಮಲಾದೇವಿ)**

ನಮ್ಮ ಜೀವನದ ಮಾರ್ಗ, ಅದರಲ್ಲೂ ಅದು ನಮ್ಮ ಹುಟ್ಟಿನ ಧ್ಯೇಯವನ್ನು ಈಡೇರಿಸುತ್ತದೆ ಎಂದು ಗೊತ್ತಿರುವಾಗ, ನಾವು ಆ ದಿಕ್ಕನ್ನು ಬದಲಾಯಿಸಲಾಗುವುದಿಲ್ಲ. ಪ್ರತಿಯೊಬ್ಬರಿಗೂ ಒಂದು ಗುರಿ ಇದೆ.

ಒಬ್ಬ ವ್ಯಕ್ತಿ ತನ್ನ ಜೀವನದ ಧ್ಯೇಯದ ಅರಿವಿಲ್ಲದೆ, ಇಡೀ ಜೀವನವನ್ನು ಕಳೆಯಬಹುದು. ಯಾರೂ ನಮಗೆ ಇದರ ಬಗ್ಗೆ ಹೇಳುವುದಿಲ್ಲ. ನಾವೇ ಹುಡುಕಿ, ಕಂಡುಕೊಳ್ಳಬೇಕು. ನಾವು ನಮ್ಮೊಳಗೆ ಹುಡುಕಬೇಕು. ನಮ್ಮ ಅಂತರ್-ಗ್ರಹಣ ಶಕ್ತಿಯಿಂದ ಹುಡುಕಬೇಕು.

ನಾವು ಹುಟ್ಟುವ ಮೊದಲೇ ನಮ್ಮ ಜೀವನದ ಧ್ಯೇಯವನ್ನು ಆಯ್ಕೆಮಾಡಿಕೊಂಡಿರಬಹುದು. ನಮ್ಮ ಇಚ್ಛಾಸ್ವಾತಂತ್ರ್ಯದಿಂದ ಆಯ್ಕೆಮಾಡಿರಬಹುದು. ಹೀಗೆ ಆಯ್ಕೆಮಾಡಿದಮೇಲೆ, ನಾವು ಅದನ್ನು ಈಡೇರಿಸಬೇಕು. ನಾವು ಈಡೇರಿಸದಿದ್ದರೆ, ನಮ್ಮನ್ನು ಯಾರೂ ಆಕ್ಷೇಪಿಸುವುದಿಲ್ಲ. ಆದರೆ ಅದು ನಮ್ಮ ಆಧ್ಯಾತ್ಮಿಕ ಸೋಲಾಗುತ್ತದೆ.

ಧ್ಯೇಯವನ್ನು ಈಡೇರಿಸುವ ಮಾರ್ಗ ಯಾವಾಗಲೂ ಸುಲಭ ಇಲ್ಲದಿರಬಹುದು. ಅದು ಬಹಳ ಕಷ್ಟ ಇರಬಹುದು. ಆದರೆ ನಾವು ಅದಕ್ಕಾಗಿ ಶ್ರಮಿಸಬೇಕು. ನಾವು ಜೀವನದ ಮಾರ್ಗ ಬದಲಾಯಿಸಿದರೆ, ಯಾರೂ ಆಕ್ಷೇಪಿಸುವುದಿಲ್ಲ. ನಮ್ಮ ಬಗ್ಗೆ ನಿರ್ಣಯಿಸದೆ, ನಮಗೆ ಸಹಾಯಮಾಡುವುದಕ್ಕಾಗಿ, ವಿಶ್ವಪ್ರಜ್ಞೆ ನಮ್ಮ ಜೀವನದ ಮೇಲ್ವಿಚಾರಣೆ ಮಾಡುತ್ತದೆ. ನಾವು ಮಾರ್ಗದರ್ಶನ ಕೋರಿದರೆ ಅದು ಮಾರ್ಗದರ್ಶಿಸುತ್ತದೆ. ನಾವು ಸಹಾಯ ಕೋರಿದರೆ, ಅದು ಸಹಾಯ ಮಾಡುತ್ತದೆ. ಆದರೆ ಅದು ನಮ್ಮ ಜೀವನದ ಮಾರ್ಗವನ್ನು ನಿರ್ದೇಶಿಸುವುದಿಲ್ಲ. ಆಯ್ಕೆಮಾಡುವವರು ನಾವು. ಸರಿ ಅಥವಾ ತಪ್ಪು ಆಯ್ಕೆಮಾಡುವವರು ಯಾವಾಗಲೂ ನಾವೇ.

ಪ್ರಪಂಚದ ಬೆಳಕಿನ ಮಾಸ್ಟರ್‌ಗಳು ಒಂದುಗೂಡಬೇಕು. ನಾವೆಲ್ಲ ಒಂದುಗೂಡಿ, ನಮ್ಮ ಆಧ್ಯಾತ್ಮಿಕ ಜ್ಞಾನವನ್ನು ಹಂಚಿಕೊಂಡಾಗ ಮಾತ್ರ ಮುಂದಿನ ದಾರಿ ಸ್ಪಷ್ಟವಾಗಿ ಕಾಣುತ್ತದೆ. ಪ್ರತಿಯೊಬ್ಬ ಮಾಸ್ಟರ್ ಬಳಿ ತಾವು ಸಂಗ್ರಹಿಸಿರುವ ಜ್ಞಾನವಿದೆ, ಆಧ್ಯಾತ್ಮಿಕ ಸಮಸ್ಯೆಗಳಿಗೆ ತಮ್ಮದೇ ಆದ ಉತ್ತರಗಳಿವೆ, ಮತ್ತು ಹೊಸಯುಗಕ್ಕೆ ಕರೆದೊಯ್ಯುವ, ಈ ಕಷ್ಟಕರ ಸಮಯಗಳನ್ನು ಸುಲಭವಾಗಿ ದಾಟಲು, ಅವರ ಬಳಿ ಸೂಚನೆಗಳು ಮತ್ತು ಸಲಹೆಗಳು ಇವೆ. ಇವುಗಳೆಲ್ಲ ಉತ್ತಮವಾಗಿರಬಹುದು ಮತ್ತು ಅವರ ಅನುಯಾಯಿಗಳನ್ನು ಮುಂದೆ ಕೊಂಡೊಯ್ಯಲು ಸಾಕಾಗಬಹುದು. ಆದರೆ ಇಡೀ ಪ್ರಪಂಚವನ್ನು ಮುಂದೆ ಕೊಂಡೊಯ್ಯಲು ಸಾಕಾಗುವುದಿಲ್ಲ. ಆಗ, ನಾವೆಲ್ಲ ಒಟ್ಟಿಗೆ ಸೇರಬೇಕು ಮತ್ತು ಒಂದು ವಿಶ್ವ ಆಧ್ಯಾತ್ಮಿಕ ವ್ಯವಸ್ಥೆಯನ್ನು ರೂಪಿಸಬೇಕು. ನಾವು ಒಂದು ವಿಶ್ವ ಮೌಲ್ಯ ವ್ಯವಸ್ಥೆಯನ್ನು ರೂಪಿಸಬೇಕು. ಇದಕ್ಕಾಗಿ, ನಾವೆಲ್ಲ ಒಂದುಗೂಡಬೇಕು.

ಒಂದುಗೂಡುವ ಮತ್ತು ಮನುಕುಲವನ್ನು ಮುನ್ನಡೆಸುವ ಸಮಯ ಈಗ ಬಂದಿದೆ.

ಅಮರರವರು ಪ್ರಪಂಚದ ಆಧ್ಯಾತ್ಮಿಕ ಸಮಸ್ಯೆಗಳಿಗೆ, ಒಗ್ಗಟ್ಟಿನ ಮಾರ್ಗದ ಕನಸು ಕಂಡಿದ್ದರು. ಹಿಂದಿನ ಕಾಲಚಕ್ರಗಳಲ್ಲಿ, ಸಾವಿರಾರು ವರ್ಷಗಳ ಹಿಂದೆ, ಇಡೀ ಪ್ರಪಂಚಕ್ಕೆ ಒಂದೇ ಒಂದು ಮೌಲ್ಯ ವ್ಯವಸ್ಥೆ ಇತ್ತು ಎಂದು ಅವರು ನಮಗೆ ಹೇಳುತ್ತಿದ್ದರು. ಒಂದು ಕಾಲಚಕ್ರದಲ್ಲಿ, ಹದಿಮೂರು ಬಿಲಿಯನ್ ಜನರು, ಪ್ರೀತಿಯಿಂದ ಎಲ್ಲವನ್ನೂ ಹಂಚಿಕೊಂಡು, ಶಾಂತಿ ಮತ್ತು ಸಂತೋಷಗಳಿಂದ ಈ ಭೂಮಿಯ ಮೇಲೆ ವಾಸಮಾಡುತ್ತಿದ್ದರು. ಯಾವ ಕೊರತೆಗಳೂ ಇರಲಿಲ್ಲ. ಯಾವ ಸಮಸ್ಯೆಗಳೂ ಇರಲಿಲ್ಲ.

ಇಂತಹ ವಿಷಯಗಳನ್ನು ನಂಬಲು ಕಷ್ಟವಾಗಬಹುದು. ಆದರೆ ಅಮರರವರು ಆ ಕಾಲದಲ್ಲಿ ಇದ್ದರು ಮತ್ತು ಎಲ್ಲ ನೆನಪಿನಲ್ಲಿಟ್ಟುಕೊಂಡಿದ್ದರು. ಅವರು ನಮಗೆ, "ನೀವೂ ನನ್ನೊಂದಿಗೆ ಅಲ್ಲಿ ಇದ್ದಿರಿ ಆದರೆ ನಿಮಗೆ ಈಗ ನೆನಪಿಸಿಕೊಳ್ಳಲು ಆಗುತ್ತಿಲ್ಲ," ಎಂದು ಹೇಳುತ್ತಿದ್ದರು.

ನಾವು ಬೆಳಕಿನ ಯುಗದತ್ತ ಸಾಗಿದಂತೆ ಮತ್ತು ನಮ್ಮ ಆಂತರಿಕ ಶಕ್ತಿಗಳು ಪುನಃ ತೆರೆದುಕೊಂಡಾಗ, ನಮ್ಮ ನೆನಪಿಗೆ ಬರಬಹುದು.

ಬೆಳಕಿನ ಯುಗ ಬರುವ ಮೊದಲು, ಈ ಭ್ರಷ್ಟಾಚಾರ ಮತ್ತು ಹಿಂಸೆಗಳ ಅವ್ಯವಸ್ಥೆ ಶುದ್ಧಗೊಳ್ಳಬೇಕು. ಅದಕ್ಕಾಗಿ, ನಾವು ಧ್ಯಾನ ಮಾಡಬೇಕು ಮತ್ತು ಬೆಳಕನ್ನು ಚಾನಲ್ ಮಾಡಬೇಕು. ಬೆಳಕಿನ ಮಾಸ್ಟರ್‌ಗಳು ಒಂದುಗೂಡಬೇಕು ಮತ್ತು ಆಧ್ಯಾತ್ಮಿಕ ಮಟ್ಟದಲ್ಲಿ ಕೆಲಸಮಾಡಲು ಮಾರ್ಗದರ್ಶಿಸಬೇಕು. ■

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ 560 077. ಭಾರತ.
© (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್-ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)
ಪ್ರಕಾಶ್‌ಮಾರ್ಗ್ (ಮರಾಠಿ)
ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-
ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.

## ಅಮರರವರ ಮಹಾಸಮಾಧಿ ಕಾರ್ಯಕ್ರಮ

### 29–8–2010, ಭಾನುವಾರ

| | |
|---|---|
| ಬೆಳಿಗ್ಗೆ 11ಘಂ. | ಓಂಕಾರ |
| | ಸ್ವಾಗತ ಭಾಷಣ |
| | ಭಾಷಣಗಳು |
| | ಗುರೂಜಿಯವರ ನುಡಿಗಳು |
| | ಪುಸ್ತಕಗಳ ಬಿಡುಗಡೆ |
| | ವಿಶೇಷ ಧ್ಯಾನ |
| | ಗುರೂಜಿಯವರಿಂದ ಆಶೀರ್ವಾದ |
| ಮಧ್ಯಾಹ್ನ 12.30 | ಪ್ರಸಾದ |

### ಸುದ್ದಿ–ಸೂಚನೆ

- ಅಮರರವರ ಪುಣ್ಯತಿಥಿಯನ್ನು 29–8–2010ರಂದು ತಪೋನಗರದಲ್ಲಿ ಆಯೋಜಿಸಲಾಗಿದೆ. ರಿಜಿಸ್ಟ್ರೇಶನ್‌ಗೆ ಕೊನೆಯ ದಿನಾಂಕ 25–8–2010.
- 29–8–2010ರಂದು ಎರಡು ಪುಸ್ತಕಗಳನ್ನು ಬಿಡುಗಡೆ ಮಾಡಲಾಗುವುದು iGuruji Vol 3 ಮತ್ತು ಅಧ್ಯಯನ ಕೇಂದ್ರ ಸದಸ್ಯರಿಂದ, ಹಲವು ಆಧ್ಯಾತ್ಮಿಕ ವಿಷಯಗಳನ್ನು ಒಳಗೊಂಡಿರುವ ಒಂದು ಪುಸ್ತಕ.
- 25–7–2010ರಂದು ಗುರುಪೂರ್ಣಿಮಾ ಪ್ರಯುಕ್ತ ತಪೋನಗರದಲ್ಲಿ ವಿಶೇಷ ಧ್ಯಾನವನ್ನು ಆಯೋಜಿಸಲಾಗಿತ್ತು.
- ನಮ್ಮ ಪ್ರಕಟಣೆಗಳಿಗೆ ಆರ್ಡರ್ ಮಾಡುವವರು ಡಿಮಾಂಡ್ ಡ್ರಾಫ್ಟ್ ಅನ್ನು "Manasa Light Age Foundation" ಹೆಸರಿನಲ್ಲಿ ಕಳುಹಿಸ ಬೇಕು.

ಈ ತಿಂಗಳ ವಾರ್ತಾಪತ್ರಗಳನ್ನು ಪ್ರಾಯೋಜಿಸಿದವರು
ಶ್ರೀ ವಿನು ವರ್ಗೀಸ್ ಮತ್ತು ಒಬ್ಬ ಹಿತೈಷಿ

## ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು | ಉಪನ್ಯಾಸಗಳು |
| | ಬೆಳಿಗ್ಗೆ 11 ರಿಂದ 12ರವರೆಗೆ |
| | ವಿಶೇಷ ಧ್ಯಾನ |
| | ಮಧ್ಯಾಹ್ನ 12 ರಿಂದ 1ರವರೆಗೆ |
| 29 ಭಾನುವಾರ | ಅಮರರವರ ಮಹಾಸಮಾಧಿ ಕಾರ್ಯಕ್ರಮ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 03 | ಮಂಗಳ | ಕೃಷ್ಣಾಷ್ಟಮಿ |
| 08 | ಭಾನು | ಮಾಸ ಶಿವರಾತ್ರಿ |
| 10 | ಮಂಗಳ | ಅಮಾವಾಸ್ಯೆ |
| 17 | ಮಂಗಳ | ಶುಕ್ಲಾಷ್ಟಮಿ |
| 20 | ಶುಕ್ರ | ಮಹಾಲಕ್ಷ್ಮಿ ಪೂಜೆ |
| 24 | ಮಂಗಳ | ಪೂರ್ಣಿಮಾ |
| 29 | ಭಾನು | ಅಮರರ ಮಹಾಸಮಾಧಿ ದಿನ |

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 06–6–10 | ಶ್ರವಣ್ ಶ್ರೀವತ್ಸ ಮತ್ತು ಪುಷ್ಪಲತಾ |
| 13–6–10 | ಅಲ್ಕಾ ಜಲನ್ ಮತ್ತು ರಾಮಮುರಳಿ |
| 20–6–10 | ವಿದ್ಯಾ ವೀರ್‌ಕರ್ |
| 27–6–10 | ಇ.ಜಿ.ಕುಲಕರ್ಣಿ ಮತ್ತು ಒಬ್ಬ ಹಿತೈಷಿ |

"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

**ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇಮೇಲ್ ಮುಖಾಂತರ ಸಂಪರ್ಕಿಸಬಹುದು.**

**14–08–2010 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.**

## ತಪೋನಗರ ಡೈರಿ

ಸಂ: ಸೀಮಾ ಅಲ್‌ಮೇಲ್; ಅನು: ವರ್ಷಾ ಗುರ್ಜರ್

ಜೂನ್ ತಿಂಗಳಲ್ಲಿ ಗುರೂಜಿಯವರು ಬೆಳಕಿನ ಸಾಗರದೊಂದಿಗೆ ಸಂಪರ್ಕ ಬೆಳೆಸಿಕೊಳ್ಳುವ ಹೊಸ ತಂತ್ರವೊಂದನ್ನು ವಿಶೇಷ ಉಡುಗೊರೆಯಾಗಿ ಸಾಧಕರಿಗೆ ನೀಡಿದರು. ಈ ತಂತ್ರದಿಂದ ಹಲವರು ಪರಬ್ರಹ್ಮನ ಇರುವಿಕೆಯನ್ನು ಅನುಭವಿಸಿದರು.

ಶ್ರೀ. ಜಯಂತ್ ದೇಶ್‌ಪಾಂಡೆಯವರ ಗೃಹಪ್ರವೇಶ ಸಮಾರಂಭಕ್ಕೆ ತಪೋನಗರ ನಿವಾಸಿಗಳೆಲ್ಲ ಒಂದುಗೂಡಿದ್ದರು. ಧಾರ್ಮಿಕ ವಿಧಿಗಳಿಗೆ ಬದಲಾಗಿ ಹೊಸಯುಗದ ತಂತ್ರವಾದ ಬೆಳಕನ್ನು ಚಾನಲ್ ಮಾಡುವ ಮೂಲಕ ಸಮಾರಂಭವನ್ನು ಆಚರಿಸಲಾಯಿತು ಮತ್ತು ಚೈತನ್ಯಗಳನ್ನು ಸ್ಥಾಪಿಸಲಾಯಿತು. ಋಷಿಗಳ ಬಗ್ಗೆ ಜಯಂತ್‌ರವರಿಗಿರುವ ಸಮರ್ಪಣಾಭಾವದ ಮೆಚ್ಚುಗೆಯ ಪ್ರತೀಕವಾಗಿ ಅವರೆಲ್ಲಾ ಬಂದು ಆ ಮನೆಯನ್ನು ಹರಸಿದರು. ಅವರು ನಂತರದ ಭಾನುವಾರ ಎಲ್ಲ ಸಾಧಕರನ್ನು ಹೊಸ ಮನೆಗೆ ಬಂದು ಶುಭ ಹಾರೈಸಲು ಆಹ್ವಾನಿಸಿದ್ದರು. ಈ ನವೀನ ಕಟ್ಟಡವು ಶುದ್ಧತೆ ಮತ್ತು ನಮ್ರತೆಯ ಸಿರಿವಂತಿಕೆಯಿಂದ ಕೂಡಿರುವ ಜಯಂತ್‌ರವರ ವ್ಯಕ್ತಿತ್ವವನ್ನು ಈಗಾಗಲೇ ಅಳವಡಿಸಿಕೊಂಡಂತೆ ಕಾಣಿಸುತ್ತಿದೆ.

ಈ ಬಾರಿ ನಿವಾಸಿಗಳ ಕೂಟ ಶ್ರೀ. ಸ್ವಾಮಿನಾಥನ್‌ರ ಮನೆಯಲ್ಲಿ ಜರುಗಿತು. ಭೂಸೇನಾ ಪಡೆಯನ್ನು ಸೇರಲು ಹೊರಟಿರುವ ಅವರ ದ್ವಿತೀಯ ಪುತ್ರನಿಗೆ ಬೀಳ್ಕೊಡುಗೆಯ ಕೂಟವೂ ಅದಾಗಿತ್ತು. ಈ ಕೂಟದಲ್ಲಿ ಆದ ವಿಚಾರ ವಿನಿಮಯ ನಮ್ಮನ್ನು ನಾವು ವಿಮರ್ಶಿಸಿಕೊಳ್ಳುವ ಹಾಗೆ ಮಾಡಿತು.

ವಾಲಂಟಿಯರ್‌ಗಳಿಗೆ ಜೂನ್ ತಿಂಗಳಿನಿಂದ ಗುರೂಜಿಯವರೊಂದಿಗೆ ವಿಚಾರವಿನಿಮಯ ಮತ್ತು ಅವರ ಮಾರ್ಗದರ್ಶನ ಪಡೆಯಲು ಇನ್ನೊಂದು ಅವಕಾಶ ಸಿಕ್ಕಿದೆ. ಗುರೂಜಿಯವರು ಪ್ರತಿ ತಿಂಗಳ ನಾಲ್ಕನೇ ಭಾನುವಾರದಂದು ಮಧ್ಯಾಹ್ನದ ಸಮಯವನ್ನು ವಾಲಂಟಿಯರ್‌ಗಳ ಮೀಟಿಂಗ್‌ಗಾಗಿ ಮೀಸಲಾಗಿಟ್ಟಿದ್ದಾರೆ.

ಚಂದ್ರಗ್ರಹಣದ ಧ್ಯಾನದೊಂದಿಗೆ ಈ ತಿಂಗಳು ಕೊನೆಯಾಯಿತು. ■

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- ಜೂನ್ ತಿಂಗಳಲ್ಲಿ ಶಾಲೆಗಳು ಆರಂಭವಾದೊಡನೆ ನಮ್ಮ ವಾಲಂಟಿಯರ್‌ಗಳು ಅತ್ಯಂತ ಪ್ರೀತಿ ಮತ್ತು ಉತ್ಸಾಹದಿಂದ ಕಾರ್ಯನಿರತರಾದರು. ಅದರ ಫಲವಾಗಿ ಜೂನ್ ತಿಂಗಳಲ್ಲಿ, ದೇಶದೆಲ್ಲೆಡೆ 120 ಸಂಸ್ಥೆಗಳಲ್ಲಿ ಸುಮಾರು 33,000ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಹಿರಿಯ ನಾಗರಿಕರು ಲೈಟ್ ಚಾನಲ್ ಮಾಡಿದರು.
- 2010 ಫೆಬ್ರವರಿ 1ರಿಂದ ಶಾಲೆಗಳಲ್ಲಿ ಲೈಟ್ ಚಾನಲ್ ಮಾಡುವುದನ್ನು ಆರಂಭಿಸಿದಾಗಿನಿಂದ ಈವರೆಗೆ ಸುಮಾರು 1.2 ಲಕ್ಷಕ್ಕಿಂತಲೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರತಿದಿನ ಭಾಗವಹಿಸುತ್ತಿದ್ದಾರೆ.
- ಹೊಸದಾಗಿ ಹಲವು ಶಾಲೆಗಳಲ್ಲಿ ಲೈಟ್ ಚಾನಲ್ ಮಾಡುವುದನ್ನು ತಮ್ಮ ದಿನನಿತ್ಯದ ಪ್ರಾರ್ಥನೆಯ ಒಂದು ಭಾಗವಾಗಿ ಮಾಡಿಕೊಂಡಿದ್ದಾರೆ.
- ಹೊಸಕೋಟೆ ಮತ್ತು ಶಿವಮೊಗ್ಗದ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಕ್ಷೇತ್ರದ 611 ಶಾಲೆಗಳಲ್ಲಿ ಲೈಟ್ ಚಾನಲ್ ಕಾರ್ಯಕ್ರಮ ನಡೆಸಲು ಅನುಮತಿ ನೀಡಿದ್ದಾರೆ.
- ಚೆನ್ನೈನ ಅರುಂಬಾಕ್ಕಮ್‌ನಲ್ಲಿ ಮತ್ತೊಂದು ಸಾಪ್ತಾಹಿಕ ಲೈಟ್ ಚಾನಲ್ ಸೆಷನ್ ಕೇಂದ್ರ ಆರಂಭವಾಯಿತು. ■

## ಲೈಟ್ ಚಾನಲಿಂಗ್ ಸೆಷನ್‌ಗಳು



ಎಂ.ಇ.ಎಸ್. ಪ್ರೌಢಶಾಲೆ, ಬೆಂಗಳೂರು



ಸರ್ಕಾರಿ ಪ್ರಾಥಮಿಕ ಶಾಲೆ, ಶಿವಮೊಗ್ಗ

## ಶಾಲಾ ವಿದ್ಯಾರ್ಥಿಗಳ ಅನುಭವಗಳು

ಆರಂಭದಲ್ಲಿ ಅಧ್ಯಾಪಕರು ಏನು ಹೇಳುತ್ತಾರೆಂದು ನಾನು ಕುತೂಹಲ ಮತ್ತು ಆಸಕ್ತಿಯಿಂದ ಕೇಳುತ್ತಿದ್ದೆ. ನಂತರ ನಾನು ಕಣ್ಣು ಮುಚ್ಚಿ ಬೆಳಕನ್ನು ಅನುಭವಿಸಲು ಆರಂಭಿಸಿದಾಗ, ಇಡೀ ವಿಶ್ವಕ್ಕೆಲ್ಲಾ ಪ್ರೀತಿ ಮತ್ತು ಶಾಂತಿಯನ್ನು ಒಂದು ಬೆಳಕು ಹರಡುತ್ತಿದ್ದುದನ್ನು ನಾನು ಅನುಭವಿಸಿದೆ. ನಾನು ಸಂಪೂರ್ಣವಾಗಿ ವಿಶ್ರಾಂತಿಯಲ್ಲಿದ್ದೆ ಮತ್ತು ನನ್ನ ಮನಸ್ಸು ಶುದ್ಧವಾಗಿತ್ತು. ಆಗ ನಾನು ಈ ಶರೀರ ಮಾತ್ರವಲ್ಲ; ನಾನು ಈ ಮನಸ್ಸು ಹಾಗೂ ನಾನು ವಿಶ್ವಚೇತನ ಎಂಬ ಆಲೋಚನೆ ಬಂತು.

–ಯಕ್ಷ ವಿ, ಸನ್‌ರೈಸ್ ಪಬ್ಲಿಕ್ ಶಾಲೆ, ಬೆಂಗಳೂರು

ಲೈಟ್ ಚಾನಲ್ ಅಭ್ಯಾಸ ಮಾಡುವಾಗ, ನಾನು ಬರೀ ಬೆಳಕನ್ನು ಗಮನಿಸುತ್ತಿದ್ದೆ. ಮೊದಲಿಗೆ ಬೆಳಕು ನನ್ನ ಶರೀರವನ್ನು ಪ್ರವೇಶಿಸಿ, ಅದು ನಿಧಾನವಾಗಿ ಇಡೀ ಬೆಂಗಳೂರು ನಗರಕ್ಕೆ ಹರಡಿತು. ನಂತರ ಕರ್ನಾಟಕ ರಾಜ್ಯ, ನಮ್ಮ ದೇಶ, ನಮ್ಮ ಪ್ರಪಂಚ ಮತ್ತು ಅಂತಿಮವಾಗಿ ಅದು ಸಂಪೂರ್ಣ ವಿಶ್ವಕ್ಕೆ ಹರಡಿತು. ಬೆಳಕಿನ ಸುನಾಮಿ ನಮ್ಮನ್ನು ಒಂದು ನಿಮಿಷ ಕಾಲ ಆವರಿಸಿತು.

–ಕಮಲೇಶ್ ಕುಮಾರ್, ಸನ್‌ರೈಸ್ ಪಬ್ಲಿಕ್ ಶಾಲೆ, ಬೆಂಗಳೂರು

ನಾವು ಕಣ್ಣುಗಳನ್ನು ಮುಚ್ಚಿದಾಗ ಬೆಳಕು ನಮ್ಮ ದೇಹದ ಮೇಲೆ ಬಿತ್ತು ಮತ್ತು ನನಗೆ ಉಲ್ಲಾಸದ ಅನುಭವವಾಯಿತು.

–ರಕ್ಷಿತ್, ನವೋದಯ ವಿದ್ಯಾ ನಿಕೇತನ್, ಬೆಂಗಳೂರು

ನಾವು ನಮ್ಮ ಕಣ್ಣುಗಳನ್ನು ಮುಚ್ಚಿದಾಗ ಮೊದಲು ಕತ್ತಲು ತುಂಬಿತು. ನಂತರ ನಿಧಾನವಾಗಿ ಸೂರ್ಯನ ಕಿರಣಗಳು ನನ್ನ ಕಣ್ಣಿನ ಮೇಲೆ ಬಿತ್ತು. ನೀವು ನಮಗೆ ಒಂದು ಅತ್ಯುತ್ತಮ ಅಭ್ಯಾಸವನ್ನು ಹೇಳಿಕೊಟ್ಟಿರುವಿರಿ.

– ಕ್ಲೆಮೆಂಟ್, ನವೋದಯ ವಿದ್ಯಾ ನಿಕೇತನ್, ಬೆಂಗಳೂರು

1–7–2010ರ ಲೈಟ್ ಚಾನಲ್ ಸೆಷನ್ ಸಮಯದಲ್ಲಿ ನಾನು ಸಂಪೂರ್ಣವಾಗಿ ಬೆಳಕಿನಲ್ಲಿ ಮುಳುಗಿದ್ದೆ. ಆಗ ನಾನು ಬೆಳಕಿನೊಂದಿಗೆ ಒಂದಾದಂತೆ ಅನಿಸಿತು. ನಾನು ಕಣ್ಣು ತೆರೆದಾಗ, ಎಲ್ಲೆಡೆ ಬರೀ ಬೆಳಕನ್ನು ನೋಡಿದೆ. ಈಗ ನಾನು ಲೈಟ್ ಚಾನಲ್ ಅನ್ನು ಪ್ರತಿನಿತ್ಯ ಅಭ್ಯಾಸ ಮಾಡುತ್ತಿದ್ದೇನೆ.

–ಸ್ಫೂರ್ತಿ ಶಂಕರ್, ಸಂತ ಫ್ರಾನ್ಸಿಸ್ ಪ್ರೌಢಶಾಲೆ, ಬೆಂಗಳೂರು

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

**06-06-2010**

ಬದಲಾವಣೆಗಳು ಮತ್ತು ಕಷ್ಟಕರ ಸಮಯಗಳು ನಮ್ಮ ಧ್ಯಾನಗಳನ್ನು ಕಷ್ಟವೆನಿಸುವಂತೆ ಮಾಡುತ್ತವೆ. ಪ್ರತಿಯೊಂದು ಬದಲಾವಣೆ ಒಂದು ರೀತಿಯ ಪರೀಕ್ಷೆ. ಇದರಿಂದ ಅನೇಕ ಪ್ರಯೋಜನಗಳೂ ಇವೆ. ನಿಮ್ಮ ಪ್ರಾಮಾಣಿಕ ಪ್ರಯತ್ನಗಳನ್ನು ಮುಂದುವರಿಸಿ, ಉಳಿದೆಲ್ಲವನ್ನು ಋಷಿಗಳಿಗೆ ಬಿಡಿ.

ಮೇ 27, ಬುದ್ಧಪೂರ್ಣಿಮೆಯಿಂದ ಚೈತನಗಳಲ್ಲಿ ಉಂಟಾಗುವ ಬದಲಾವಣೆಗಳು ಹೊಸ ಅವಕಾಶಗಳನ್ನು, ರೋಮಾಂಚಕ ಸವಾಲುಗಳನ್ನು ಮತ್ತು ಪರೀಕ್ಷೆಗಳನ್ನು ಒಡ್ಡುತ್ತವೆ. ಋಷಿಗಳೊಡನೆ ಸಂಪರ್ಕ ಹೊಂದುವುದು ಈಗ ಸುಲಭ. 2012 ಬಹಳ ದೂರವಿಲ್ಲ; ಸೂಕ್ಷ್ಮ ಹಂತದಲ್ಲಿ ಋಷಿಗಳಿಂದ ಅದ್ಭುತ ತಯಾರಿ ನಡೆದಿದೆ. ನಮ್ಮ ಸುತ್ತಮುತ್ತ ಸಂಭವಿಸುತ್ತಿರುವ ಬದಲಾವಣೆಗಳಿಗೆ ಜಾಗೃತರಾಗಿರಬೇಕು, ಇವುಗಳನ್ನು ಗಮನದಲ್ಲಿಟ್ಟು, ಮುಂದೆ ಹೋಗಬೇಕು.

ಜ್ಞಾನೋದಯದ ಹಂತವನ್ನು ತಲುಪಿದ ನಂತರ ನಮ್ಮ ಸಾಧನೆಯನ್ನು ಮುಂದುವರಿಸಿದರೆ, ನಮ್ಮ ಪ್ರಜ್ಞೆ ಜ್ಞಾನೋದಯದಿಂದ ಆಚೆ ಹೋಗುತ್ತದೆ ಮತ್ತು ಹೊಸ ವಾಸ್ತವತೆಗಳು ನಮ್ಮ ಅರಿವಿಗೆ ಬರುತ್ತವೆ, ಹೊಸಜೀವಿಗಳನ್ನು, ದೇವತೆಗಳನ್ನು, ದೇವರುಗಳನ್ನು ಸಂಧಿಸುತ್ತೇವೆ. ನಂತರ ನಾವು ಋಷಿತ್ವವನ್ನು ಪಡೆಯುತ್ತೇವೆ.

ಋಷಿಯಲ್ಲಿ ಬೆಳಕಿರುತ್ತದೆ ಮತ್ತು ಆ ಬೆಳಕನ್ನು ಅವರು ಹೊರಸೂಸುತ್ತಾರೆ. ಋಷಿಗಳು ದೇವರಿಗಾಗಿ ಕೆಲಸ ಮಾಡಲು ಆರಿಸಿಕೊಳ್ಳುತ್ತಾರೆ ಏಕೆಂದರೆ ದೇವರನ್ನು ಅವರು ಹೆಚ್ಚು ಪ್ರೀತಿಸುತ್ತಾರೆ. ಅಮರರು, ಒಬ್ಬ ಋಷಿ ಕಾರ್ಯಕರ್ತರಿಗೆ 108 ಸಾಧನಗಳನ್ನು ಅಳವಡಿಸಲಾಗಿರುತ್ತದೆ ಎಂದು ತಿಳಿಸಿದ್ದರು. ಋಷಿ ಕಾರ್ಯಕರ್ತರಿಗೆ ತರಬೇತಿ ಕೊಟ್ಟು, ಒಂದು ಭೂಮಿಯ ಮೇಲೆ ಕೆಲಸ ಮಾಡಲು ಅವರನ್ನು ನಿಯೋಜಿಸಲಾಗುತ್ತದೆ. ನಂತರ ಆ ಲೋಕದಲ್ಲಿ ಬೇರೆ ಭೂಮಿಯ ಮೇಲೆ ಕೆಲಸ ಮಾಡಲು ವರ್ಗಾಯಿಸುತ್ತಾರೆ. ಅವರು ಬೆಳೆಯುತ್ತಾ ಮುಂದುವರಿಯುತ್ತಿದ್ದಂತೆ ಇತರ ಉನ್ನತ ವರ್ಗದ ಭೂಮಿಗಳಲ್ಲಿ ಕೆಲಸ ಮಾಡಲು ತೊಡಗಿಸುತ್ತಾರೆ.

ಕೋಟಿಗಟ್ಟಲೆ ಭೂಮಿಗಳಲ್ಲಿ, ಕೆಲಸ ಮಾಡುತ್ತಿರುವ ಎಲ್ಲಾ ಋಷಿಗಳು ಸಪ್ತಋಷಿಗಳ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಾರೆ. ಸಪ್ತಋಷಿಗಳ ಒಂದು ಮಹಾನ್ ಸಮಿತಿ ಇದೆ. ನಮ್ಮ ಕೇಂದ್ರವು ಈ ಮಹಾನ್ ಸಪ್ತಋಷಿಗಳ ನೇರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತದೆ.

ಭೂಮಿಯ ಮೇಲೆ ಋಷಿಗಳು 1,44,000 ಕೇಂದ್ರಗಳನ್ನು ಹೊಂದಿದ್ದಾರೆ. ಒಬ್ಬ ಋಷಿ ಇಡೀ ಪ್ರಪಂಚಕ್ಕೆ ಬೆಳಕಿನ ಮಾಸ್ಟರ್ ಆಗಿರುತ್ತಾರೆ. ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿರುವ ವಿಶೇಷ ಜೀವಿಗಳಾದ ದೇವತೆಗಳು ಅಷ್ಟದಿಕ್ಪಾಲಕ ಲೋಕಗಳಿಂದ ಬರುತ್ತಾರೆ. ಅವರು ಅನೇಕ ರೀತಿಗಳಲ್ಲಿ ಸಹಾಯ ಮಾಡಲು ಇಲ್ಲಿಗೆ ಬಂದಿದ್ದರೂ ಋಷಿಗಳ ಹಾಗೆ ಪರಮೋನ್ನತ ಜ್ಞಾನ, ವಿವೇಕ ಮತ್ತು ಎಲ್ಲ ಶಕ್ತಿಗಳನ್ನು ಹೊಂದಿರುವುದಿಲ್ಲ.

ಸತ್ಯ ಸಂಗತಿಯೆಂದರೆ, ನಿಮ್ಮ ಸಮಸ್ಯೆ ನಿಮ್ಮಿಂದಲೇ ಸೃಷ್ಟಿಯಾಗಿದೆ. ನೀವು ಇದಕ್ಕಾಗಿ ಯಾರನ್ನೂ ನಿಂದಿಸಬಾರದು.

ಕೆಲವರು ತಾವು ಋಷಿಗಳೊಂದಿಗೆ ನೇರ ಸಂಪರ್ಕದಲ್ಲಿದ್ದೇವೆಂದು ಹೇಳುತ್ತಾರೆ. ನೀವು ನಿಜವಾಗಿಯೂ ಋಷಿಗಳಿಂದ ಮಾರ್ಗ ದರ್ಶಿತರಾಗಿದ್ದರೆ ನಾನು ನಿಮ್ಮಲ್ಲಿ ಪ್ರಾಮಾಣಿಕತೆಯನ್ನು ನೋಡಬಯಸುತ್ತೇನೆ. ಪ್ರಾಮಾಣಿಕತೆ ಇರದ ವ್ಯಕ್ತಿ ಆಧ್ಯಾತ್ಮಿಕ ಅಲ್ಲ.

2012 ಎಂತಹ ಕಾಲಾವಧಿ ಎಂದರೆ ಅದು ನಮ್ಮನ್ನು ನಿರ್ದಯವಾಗಿ ವ್ಯವಹರಿಸುವ ಕಾಲವಾಗಿದೆ. ಅದು ಹಾಗೆಯೇ ಇರಬೇಕು. ಈ ಗಳಿಗೆಯಿಂದ ಆರಂಭವಾಗುವ ಹೊಸಯುಗವನ್ನು ಪ್ರವೇಶಿಸಲು ನಾವು ಸಿದ್ಧರಾಗೋಣ.

**13.06.2010**

ಬೆಳಕಿನ ಸಾಗರದೊಂದಿಗೆ ಸಂಪರ್ಕಗೊಂಡರೆ ನಾವು ನಮ್ಮ ಇಡೀ ಜೀವನದೊಂದಿಗೆ, ಯಾವುದೇ ಪರಿಸ್ಥಿತಿ ಅಥವಾ ಎಂತಹ ಸಮಸ್ಯೆಯೊಂದಿಗಾದರೂ ವ್ಯವಹರಿಸಬಹುದು. ಬೆಳಕು ವಿವೇಕವನ್ನು ಹೊಂದಿರುತ್ತದೆ.

ಧ್ಯಾನಿಗಳು ಧ್ಯಾನ ಮಾಡುವುದಕ್ಕೆ ಕಷ್ಟ ಪಡುತ್ತಿದ್ದಾರೆ. ಚಾನಲಿಂಗ್ ಮಾಡುವುದು ಅಥವಾ ಶಂಬಲ ನಿಯಮಗಳನ್ನು ಅಭ್ಯಾಸ ಮಾಡುವುದು ಒಳ್ಳೆಯದು. ಆದರೆ ಇವು ಧ್ಯಾನಕ್ಕೆ ಪರ್ಯಾಯ ಅಲ್ಲ. ಧ್ಯಾನ ಕಡ್ಡಾಯ.

ನಾವು ಬದಲಾಗಲು ಮತ್ತು ಶಾಂತಿಗಾಗಿ ಧ್ಯಾನವನ್ನು ತೆಗೆದುಕೊಂಡರೆ, ಆಗ ನಮ್ಮ ಸಮಸ್ಯೆಗಳು ಕೂಡಾ ಪರಿಹಾರವಾಗುತ್ತವೆ. ಇದಕ್ಕೆ ಇಡೀ ವಿಶ್ವವೇ ಸಹಾಯ ಮಾಡುತ್ತದೆ. ಯಾರಿಗೆ ಅತ್ಯಂತ ಸರಳ ಹಾಗೂ ಸಾಧನೆಯಲ್ಲಿ ಪ್ರಾಸಂಗಿಕ ಆಸಕ್ತಿ ಇರುತ್ತದೆಯೋ ಅಂಥವರು ಸಪ್ತರ್ಷಿ ಪ್ರಾಣಾಯಾಮ, ಆಯಾ ಹಂತದ ಧ್ಯಾನ, ರಕ್ಷಾಕವಚವನ್ನು ಬಲಪಡಿಸುವುದು ಮತ್ತು ಬೆಳಕನ್ನು ಚಾನಲ್ ಮಾಡುವುದನ್ನು ಅಭ್ಯಾಸಮಾಡಬೇಕು. ಆದರೆ ಸಾಧನೆಯನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಂಡಿರುವವರು ಈ ಎಲ್ಲ ಅಭ್ಯಾಸಗಳನ್ನು ಬಿಡದೆ ಕ್ರಮಬದ್ಧವಾಗಿ ಮಾಡಬೇಕು. ಇದರೊಂದಿಗೆ ಅತ್ಯಂತ ಮುಖ್ಯವಾಗಿ ಶಂಬಲನಿಯಮಗಳನ್ನು ಮತ್ತು ಬೆಳಕಿನೊಂದಿಗೆ ಇರುವ ತಂತ್ರವನ್ನು ತಪ್ಪದೆ ಅಭ್ಯಾಸ ಮಾಡಬೇಕು. ಬೆಳಕನ್ನು ಅನುಭವಿಸಿ. ಯಾವಾಗಲೂ ಬೆಳಕಿನ ಸಾಗರದೊಂದಿಗೆ ಸಂಪರ್ಕದಲ್ಲಿರಿ. ಹೆಚ್ಚು ಗಂಭೀರ ಸಾಧಕರು ಶಂಬಲ ಗ್ರೂಪ್, ರಾ ಗ್ರೂಪ್‌ಗಳಿಗೆ ಸೇರಬಹುದು. ಸಾಧನೆಯನ್ನು ಅತಿ ಹೆಚ್ಚು ಗಂಭೀರವಾಗಿ ಪರಿಗಣಿಸಿದವರು ವೈಯಕ್ತಿಕ ಮಾರ್ಗದರ್ಶನಕ್ಕಾಗಿ ನನ್ನನ್ನು ಸಂಪರ್ಕಿಸಬಹುದು. ನಿಮಗೆ ಯಾವಾಗಲೂ ಸಹಾಯಹಸ್ತ ಸಿದ್ಧವಿದೆ ಎಂಬುದನ್ನು ನೆನಪಿನಲ್ಲಿಡಿ.

ಚಿಂತನೆಯ ಅಂಶಗಳು :

ಸಮಾಧಿಯನ್ನು ಅನುಭವಿಸುವ ವಿಷಯದಲ್ಲಿ ಇತರರ ಬಗ್ಗೆ ಇಷ್ಟವಿಲ್ಲದಿರುವಿಕೆಯ ಸಣ್ಣ ಅಂಶ ಕೂಡಾ ಅಡಚಣೆ ಉಂಟುಮಾಡುತ್ತದೆ.

ನಿಮ್ಮ ಸ್ವಂತ ಆಲೋಚನೆಗಳು ಮತ್ತು ಭಾವನೆಗಳಿಗೆ ಸಾಕ್ಷಿಯಾಗಿರಲು ಪ್ರಯತ್ನಿಸಿ. ಅವುಗಳೊಂದಿಗೆ ನಿಮ್ಮನ್ನು ಗುರುತಿಸಿಕೊಳ್ಳಬೇಡಿ.

ಋಷಿಗಳು ಒಬ್ಬ ವ್ಯಕ್ತಿಗೆ ಕೆಲವು ನಿರ್ದಿಷ್ಟ ಅಂಶಗಳನ್ನು ತಿಳಿಸಿದರು. ಅವರು, "ಸಮಸ್ಯೆಯನ್ನು ಒಪ್ಪಿಕೊಳ್ಳಿ, ನಂತರ ಪರಿಹಾರ ಸಿಗುತ್ತದೆ. ನೀವು ಒಪ್ಪಿಕೊಳ್ಳದೆ, ಹತಾಶರಾದರೆ ಪರಿಹಾರವನ್ನು ಅರ್ಥಮಾಡಿಕೊಳ್ಳಲಾರಿರಿ. ಕೆಲವು ಸಾರಿ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲು, ಅದನ್ನು ಎದುರಿಸಬೇಕಾಗುತ್ತದೆ" ಎಂದರು. ಈ ಬಗ್ಗೆ ಚಿಂತನೆ ಮಾಡಿ.

ನಿಮಗಾಗಿ ಒಂದು ವೈಯಕ್ತಿಕ ಮತ್ತು ಖಾಸಗಿ ಸ್ಥಳಾವಕಾಶವನ್ನು ಸೃಷ್ಟಿಸಿಕೊಳ್ಳಿ, ಅಲ್ಲಿ ತನ್ನಷ್ಟಕ್ಕೆ ತಾನೆ ನಿಶ್ಚಲತೆಯಿರುತ್ತದೆ, ಕಾರಣ ನೀವು ಈ ಪ್ರಪಂಚದಿಂದ, ಜನರಿಂದ ದೂರ ಇರುತ್ತೀರಿ. ಆ ಸ್ಥಳದಲ್ಲಿ ನೀವು ಸುಲಭವಾಗಿ ವಿಶ್ವಪ್ರಜ್ಞೆಗೆ, ಬೆಳಕಿಗೆ ಮತ್ತು ಋಷಿಗಳಿಗೆ ಸಂಪರ್ಕ ಪಡೆಯಬಹುದು. ನೀವು ಈ ಸ್ಥಳಾವಕಾಶದಲ್ಲಿ ಅನೇಕ ಅದ್ಭುತಗಳು ಘಟಿಸುವುದನ್ನು ನೋಡುವಿರಿ.

ನಾವು ಋಷಿಗಳಲ್ಲಿ ವಿಶ್ವಾಸವನ್ನಿಟ್ಟ ಮೇಲೆ ಅವರಲ್ಲಿ ಬೇಡುವುದನ್ನು ನಿಲ್ಲಿಸುತ್ತೇವೆ. ಸಮಸ್ಯೆ ತಲೆದೋರಿದಾಗ ಅವರು ತಾವಾಗಿಯೇ ಪರಿಹರಿಸುತ್ತಾರೆ. ನಮಗೆ ಎಲ್ಲವನ್ನೂ ನೀಡುತ್ತಾರೆ. ನಾವು ಸ್ವಲ್ಪ ತಾಳ್ಮೆ, ಅಗಾಧ ಪ್ರೀತಿ ಮತ್ತು ಆಳವಾದ ವಿಶ್ವಾಸ ಹೊಂದಿರಬೇಕು.

ನಾವು ನಮ್ಮೊಡನೆ ಸ್ವಲ್ಪ ಕಟ್ಟುನಿಟ್ಟಾಗಿರೋಣ. ನಮ್ಮ ಕುಂದುಕೊರತೆಗಳನ್ನು ಮತ್ತು ಒಳ್ಳೆಯ

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)
(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

ಅಂಶಗಳನ್ನು ಗುರುತಿಸಿಕೊಳ್ಳಲು ಪ್ರಯತ್ನಿಸೋಣ. ಯಾವುದು ಒಳ್ಳೆಯದಲ್ಲವೋ, ಸರಿಯಲ್ಲವೋ ಅವುಗಳನ್ನು ಕಿತ್ತೆಸೆಯೋಣ ಮತ್ತು ಗುಣಾಂಶಗಳನ್ನು ಸಬಲಗೊಳಿಸೋಣ.

**20.06.2010**

ಬೆಳಕಿನ ಸಾಗರದೊಂದಿಗೆ ನಾವು ಸಾಧ್ಯವಿರುವ ಮಟ್ಟಿಗೆ ಸಂಪರ್ಕಗೊಂಡಾಗ ನಮ್ಮ ನಡತೆ, ಆಲೋಚನೆ ಮತ್ತು ಭಾವೋದ್ರೇಕಗಳು ಪರಿಪೂರ್ಣವಾಗಿರುತ್ತವೆ.

ಒಬ್ಬ ವ್ಯಕ್ತಿ ವಿಮಾನ ನಿಲ್ದಾಣ ರಸ್ತೆಯಲ್ಲಿ ಪ್ರಯಾಣಿಸುತ್ತಿದ್ದರು. ಅವರು ಬೆಳಕನ್ನು ಕಂಡರು. ಅವರು ಮುಂಬೈನಲ್ಲಿದ್ದ ಸ್ನೇಹಿತರಿಗೆ ಕರೆಮಾಡಿ, "ಇಲ್ಲಿ ಹತ್ತಿರದಲ್ಲೆಲ್ಲಾದರೂ ತಪೋನಗರ ಇದೆಯೇ?" ಎಂದು ಪ್ರಶ್ನಿಸಿದರು. ಅವರ ಸ್ನೇಹಿತರು ಹೌದೆಂದು ತಿಳಿಸಿದರು. ಅವರಿಗಾದ ಸಂತೋಷಕ್ಕೆ ಪಾರವೇ ಇಲ್ಲದಂತಾಗಿತ್ತು. ಅದೊಂದು ಅದ್ಭುತವಾದ ಅನುಭವ. ವಿಮಾನ ನಿಲ್ದಾಣ ರಸ್ತೆಗಳಲ್ಲಿ ಹೋಗುವವರು ತಪೋನಗರದಲ್ಲಿರುವ ಬೆಳಕನ್ನು ನೋಡಬೇಕು. ತಪೋನಗರದಲ್ಲಿ ವಾಸಿಸುವವರು ತಪೋನಗರದಲ್ಲಿ ಬೆಳಕನ್ನು ನೋಡಲು ಪ್ರಯತ್ನಿಸಬೇಕು.

ವೈಯಕ್ತಿಕ ಗಮನ ಕೊಡುವುದರ ಬಗ್ಗೆ ನಾನು ಈ ಮೊದಲೇ ಹೇಳಿದ್ದೆ. ಅನೇಕರು ಇದರ ಬಗ್ಗೆ ವಿಚಾರಿಸಿದ್ದಾರೆ. ನಿಮ್ಮೆಲ್ಲರಿಗೂ ಈಗಾಗಲೇ ವೈಯಕ್ತಿಕ ಗಮನ ಕೊಡಲಾಗಿದೆ ಎಂಬುದನ್ನು ನೀವು ತಿಳಿಯಬೇಕೆಂದು ಬಯಸುತ್ತೇನೆ. ನೀವು ಒಂದು ಹಂತವನ್ನು ತಲುಪಿದ್ದು, ಮುಂದಿನ ಹಂತಕ್ಕೆ ಹೆಚ್ಚಿನ ಮಾರ್ಗದರ್ಶನ ಬೇಕೆಂದು ಭಾವಿಸಿದರೆ ಆಗ ವಿಶೇಷ ವೈಯಕ್ತಿಕ ಗಮನಕ್ಕಾಗಿ ನನ್ನನ್ನು ಸಂಪರ್ಕಿಸಬಹುದು. ನನ್ನ ಬಳಿಗೆ ಬರಬೇಕಾದರೆ ನೀವು ಧ್ಯಾನ ಮತ್ತು ಶಂಬಲ ನಿಯಮಗಳನ್ನು ಅಭ್ಯಾಸ ಮಾಡಬೇಕು.

**27.06.2010**

ದೈವಿಕತೆಯ ಅನುಭವದಿಂದ ಜ್ಞಾನ, ಅಗಾಧವಾದ ವಿವೇಕ ಮತ್ತು ಅನೇಕ ಪ್ರಯೋಜನಗಳುಂಟಾಗುತ್ತವೆ. ಜ್ಞಾನ ಇನ್ನೊಂದು ನೆಲೆಯಲ್ಲಿ ನಮ್ಮ ವ್ಯವಸ್ಥೆಯಲ್ಲಿರುತ್ತದೆ.

ನಾವು 51000 ವರ್ಷಗಳ ಹಿಂದೆ ಸೇರಿದ್ದೆವು ಎಂಬುದನ್ನು ನಾನು ವಿವರಿಸಿದ್ದೆ. ಒಬ್ಬ ವ್ಯಕ್ತಿ ಕೇಳಿದರು: 'ಇದರ ಅರ್ಥ ನಾವು ಇಷ್ಟು ವರ್ಷಗಳು ಮುಕ್ತಿ ಪಡೆಯಲಿಲ್ಲವೇ?' ಇದಕ್ಕೆ ಉತ್ತರ: 'ಹೌದು.' ಅನೇಕ ಜನ, ನಮ್ಮ ಹಾಗೆ ಕೆಲಸ ಮಾಡಲು ಹಿಂದೆ ಉಳಿಯುವುದನ್ನು ಆರಿಸಿಕೊಂಡಿರುತ್ತಾರೆ.

ಆಶ್ರಮ ಕೇವಲ ಒಂದು ಸ್ಥಳವಲ್ಲ. ಅದೊಂದು ಅಸ್ತಿತ್ವದ ಸ್ಥಿತಿ, ಆಧ್ಯಾತ್ಮಿಕ ಸ್ಥಿತಿ. ಅದು ಅತ್ಯಂತ ವೈಯಕ್ತಿಕ, ಅತಿ ಆಂತರಿಕ ಮತ್ತು ಅತ್ಯಂತ ಖಾಸಗಿ ವಿಷಯ. ನಾವು ಪ್ರತಿಯೊಬ್ಬರೂ ಇಂಥ ಆಶ್ರಮಗಳನ್ನು ನಿರ್ಮಿಸಿಕೊಳ್ಳಬಹುದು. ಯಾವುದೇ ಸಮಯದಲ್ಲಿ, ಯಾರಾದರೂ ಇದನ್ನು ಕ್ಷಣಾರ್ಧದಲ್ಲಿ ನಿರ್ಮಿಸಬಹುದು. ಮೊದಲು ನಾವು ನಿಶ್ಚಲತೆಯನ್ನು ಪ್ರತಿಷ್ಠಾಪಿಸಬೇಕು. ನಿಶ್ಚಲತೆಯಲ್ಲಿ ನಾವು ಅನುಭವ ಪಡೆಯಬೇಕು ಮತ್ತು ಪರಿವರ್ತನೆಯಾಗಬೇಕು. ಆಗ ಆಶ್ರಮದ ಅಡಿಪಾಯ ಹಾಕಿದಂತಾಗುತ್ತದೆ. ಆಶ್ರಮದಲ್ಲಿ ಅತ್ಯಂತ ಮುಖ್ಯವಾದ ವಿಷಯವೆಂದರೆ ಸ್ವಾತಂತ್ರ್ಯ. ಸ್ವಾತಂತ್ರ್ಯವು ಬದಲಾಗಲು, ಆರಿಸಿಕೊಳ್ಳಲು ಮತ್ತು ಇತರ ಅನೇಕ ಕೆಲಸಗಳನ್ನು ಮಾಡಲು ಅತ್ಯಗತ್ಯ. ಸ್ವಾತಂತ್ರ್ಯವಿಲ್ಲದ ಕಡೆ ಆಶ್ರಮವಿಲ್ಲ. ಸ್ವಾತಂತ್ರ್ಯವಿಲ್ಲದೆಡೆ ಬೆಳವಣಿಗೆ ಇಲ್ಲ.

ನಮ್ಮ ಕಾರಣ ಶರೀರ ಅಥವಾ ಆನಂದಮಯ ಕೋಶದಲ್ಲಿ ನಾವು ಪ್ರಯಾಣಿಸಿದಾಗ ಆತ್ಮಪ್ರಯಾಣ ಸಂಭವಿಸುತ್ತದೆ. ಕಾರಣ ಶರೀರವಿಲ್ಲದಿದ್ದರೆ ಆತ್ಮ ಛಿದ್ರಛಿದ್ರವಾಗಿ ಹೋಗುತ್ತದೆ. ನಾವು ಆಗಾಗ ಆತ್ಮಪ್ರಯಾಣ ಮಾಡುತ್ತೇವೆ. ಆದರೆ ನಮಗದು ತಿಳಿಯುವುದಿಲ್ಲ ನೀವು ತಪೋನಗರಕ್ಕೆ ಅಥವಾ 'ದಿ ಗ್ರೇಟ್ ರಾ' ಧ್ಯಾನ ಮಂದಿರಕ್ಕೆ ಬರಬೇಕೆಂದು ಪ್ರಯತ್ನಿಸಿದಾಗಲೆಲ್ಲಾ, ಆತ್ಮಪ್ರಯಾಣ ಮಾಡಿರುತ್ತೀರಿ, ಸೂಕ್ಷ್ಮಶರೀರ ಪ್ರಯಾಣ ಅಲ್ಲ. ಆತ್ಮಪ್ರಯಾಣ ಸೂಕ್ಷ್ಮಶರೀರ ಪ್ರಯಾಣಕ್ಕಿಂತಲೂ ಸುಲಭ. ಆತ್ಮಪ್ರಯಾಣದಲ್ಲಿ ನೀವು ಒಂದು ಸ್ಥಳದಲ್ಲಿ ಇರಬೇಕೆಂದು ಬಲವಾಗಿ ಸಂಕಲ್ಪಿಸಬೇಕು. ನಿಮ್ಮ ಆತ್ಮ ಆ ಸ್ಥಳದಲ್ಲಿರುತ್ತದೆ, ನಿಮ್ಮ ಸೂಕ್ಷ್ಮಶರೀರವಲ್ಲ. ಇದು ಅತ್ಯಂತ ಆಸಕ್ತಿಕರ ಮಾಹಿತಿ. ನಾವು ಇತರ ಆಯಾಮಗಳಿಗೆ ಆತ್ಮಪ್ರಯಾಣ ಮಾಡಬಹುದು. ನಮ್ಮ ಸೂಕ್ಷ್ಮ ಶರೀರಗಳು ಬೇರೆ ಆಯಾಮಗಳಿಗೆ ಪ್ರವೇಶ ಮಾಡಲಾರವು.

ಪೂರ್ವಜನ್ಮ ನಿವರ್ತನವನ್ನು ಒಪ್ಪಿಕೊಳ್ಳುವುದರಿಂದ ನಾವು ಆತ್ಮದ ಚಿರಂತನತೆ ಮತ್ತು ಅದರ ಪುನರ್ಜನ್ಮವನ್ನು ಒಪ್ಪಿಕೊಂಡಂತಾಗುತ್ತದೆ. ಇದು ನಾವು ಸತ್ಯಯುಗದತ್ತ ಚಲಿಸುತ್ತಿರುವುದನ್ನು ಸೂಚಿಸುತ್ತದೆ. ಹಿಂದಿನ ಜನ್ಮದ ಮಾಹಿತಿಯನ್ನು ಚಿಕಿತ್ಸೆಯ ಹಾಗೆ ಬಳಸಲಾಗುತ್ತಿದೆ. ಪ್ರಾಮಾಣಿಕವಾಗಿ ಕ್ಷಮಿಸಿ ಎಂದು ಕೇಳಿಕೊಳ್ಳುವುದರಿಂದ ಕ್ಷಣಾರ್ಧದಲ್ಲಿ ಕರ್ಮಗಳ ಪರಿಣಾಮಗಳು ಕಳೆದು ಹೋಗುತ್ತವೆ ಎಂಬುದನ್ನು ಪೂರ್ವಜನ್ಮ ನಿವರ್ತನ ರುಜುವಾತು ಪಡಿಸುತ್ತದೆ.

ಪ್ರಸ್ತುತ ಕಾಲದಲ್ಲಿ ಕರ್ಮಗಳು ಕ್ಷಣಾರ್ಧದಲ್ಲಿ ಅಲ್ಲವಾದರೂ ಬಹುಬೇಗ ತಮ್ಮ ಫಲಿತಾಂಶಗಳನ್ನು ನೀಡುತ್ತವೆ. ಅವು ಮೊದಲು ಭೌತಿಕ ಹಂತದಲ್ಲಿ ಕಾಯಿಲೆ, ಹಾನಿ ಅಥವಾ ನೋವಿನ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ನಂತರ ಮಾನಸಿಕ ಹಂತದಲ್ಲಿ ಕಾಣಿಸಿಕೊಳ್ಳುತ್ತವೆ. ನಮ್ಮ ಮಾನಸಿಕ ನೆಮ್ಮದಿ ನಾಶವಾಗುತ್ತದೆ. ಇವುಗಳನ್ನು ಹುಡುಕಿ ಪ್ರಾಮಾಣಿಕವಾಗಿ ಕ್ಷಮಿಸುವಂತೆ ಕೇಳಬೇಕು. ಆಗ ಕೂಡಲೇ ನೋವು, ಮಾನಸಿಕ ಅಶಾಂತಿ ಮಾಯವಾಗುತ್ತದೆ. ಹೀಗೆ ನಮ್ಮನ್ನು ನಾವು ಹೀಲ್ ಮಾಡಿಕೊಳ್ಳಬಹುದು.

ಮಾಸ್ಟರ್ 'ವಿ' ಹೇಳುತ್ತಾರೆ: "ವ್ಯವಸ್ಥೆಗಳು ನೈತಿಕವಾಗಿಲ್ಲವಾದರೆ ಕುಸಿಯುತ್ತವೆ, ಹಾಗೆಯೇ ವ್ಯಕ್ತಿಗಳು ಕೂಡ. ವೈಯಕ್ತಿಕ ನೆಲೆಯಲ್ಲಿ ಯಾವ ರೀತಿಯಲ್ಲಾದರೂ ಈ ಕುಸಿತ ಸಂಭವಿಸಬಹುದು. ಆದ್ದರಿಂದ ನಮ್ಮ ನೈತಿಕತೆಯನ್ನು ಬಲಗೊಳಿಸಬೇಕು. ನಾವು ಪರಿಶುದ್ಧರಾಗಿರಬೇಕು, ಪ್ರೇಮವನ್ನು ತೋರಿಸಬೇಕು. ನಾವು ಕೋಪ ಅಥವಾ ಅಸಹನೆಯನ್ನು ತೋರಿಸುವಂತಿಲ್ಲ.

ನೀವು ಲೌಕಿಕ ನೆಲೆಯಲ್ಲಿ ಏನನ್ನಾದರೂ ಮಾಡಬೇಕೆಂದು ಬಯಸಿದರೆ ಕೂಡಲೇ ಮಾಡಿ. ನಿಮ್ಮ ಯೋಜನೆಗಳನ್ನು ಬೇಗ ಪೂರ್ಣಗೊಳಿಸಿ. ದೀರ್ಘಕಾಲದ ಯೋಜನೆಗಳನ್ನು ತೆಗೆದುಕೊಳ್ಳಬೇಡಿ. ಜಾಗರೂಕರಾಗಿರಿ."

2010 ಜೂನ್ 26ರ ಚಂದ್ರಗ್ರಹಣದಿಂದ ಉದ್ಭವಿಸುವ ಗ್ರಹಣದ ಚೈತನ್ಯಗಳು ರಾ-ಚೈತನ್ಯಗಳೊಂದಿಗೆ ಸೇರಿ, ಅತ್ಯಂತ ಶಕ್ತಿಯುತ, ಹೊಸ ಚೈತನ್ಯಗಳು ಸೃಷ್ಟಿಯಾಗಿವೆ. ಋಷಿಗಳು ಈ ಚೈತನ್ಯಗಳನ್ನು ಪಾಸ್ ಮಾಡಲು ಕಾಯುತ್ತಿದ್ದಾರೆ. ಆ ದಿನ ಸ್ವಲ್ಪ ಕಾಲ ಧ್ಯಾನ ಮಾಡಿದವರಿಗೂ ಕೂಡಾ ಋಷಿಗಳು ಆಧ್ಯಾತ್ಮಿಕ ಪಲ್ಲಟಗಳನ್ನು ಉಂಟುಮಾಡಿದರು. ಈ ಬದಲಾವಣೆಗಳು ಲೌಕಿಕ ಹಂತದಲ್ಲಿ ಅದ್ಭುತ ಪರಿಹಾರಗಳನ್ನು ತರುತ್ತವೆ.

ಧ್ಯಾನಗಳು ಕಷ್ಟವೆನಿಸಿದರೆ ಸವಾಲಾಗಿ ಸ್ವೀಕರಿಸಿ. ಕರ್ಮಗಳು ಇಂಥ ನಿರುತ್ಸಾಹಗಳನ್ನು ಒಡ್ಡುತ್ತವೆ. ಆದ್ದರಿಂದ ಧ್ಯಾನವನ್ನು ಬಿಡಬೇಡಿ.

ಇದ್ದಕ್ಕಿದ್ದಂತೆ ಕೆಲವು ಸಲ ನಮಗೆ ದೊಡ್ಡ ಆಘಾತ ಉಂಟಾಗುತ್ತದೆ. ಅದನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಸಮಯವನ್ನು ವ್ಯರ್ಥಗೊಳಿಸಬೇಡಿ, ಆದರೆ ಆಧ್ಯಾತ್ಮಿಕವಾಗಿ ಬಲಪಡಿಸಿಕೊಳ್ಳಿ. ಹೆಚ್ಚು ಬೆಳಕನ್ನು ತೆಗೆದುಕೊಳ್ಳಿ. ಬೆಳಕಿನೊಂದಿಗೆ ಮಾತನಾಡಿ. ಬೆಳಕು ಮಾರ್ಗದರ್ಶಿಸುತ್ತದೆ, ಸಹಾಯ ಮಾಡುತ್ತದೆ. ಇದು ಖಚಿತ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ-ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಮಾಸ್ಟರ್ ಅಮರ

**ಶ್ಯಾಮಲಾದೇವಿ**

ಮಾಸ್ಟರ್‌ಗಳು ತಮ್ಮ ಕಾರ್ಯೋದ್ದೇಶದೊಂದಿಗೆ ಕಾಲಕಾಲಕ್ಕೆ ಜನ್ಮತಳೆಯುತ್ತಾರೆ. ಅವರ ಕಾಲಾನಂತರ, ಸಾಮಾನ್ಯವಾಗಿ ಅವರು ತಮ್ಮ ಗುಂಪುಗಳೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದಿಲ್ಲ. ಅಮರರೂ ಕೂಡ ಒಂದು ಕಾರ್ಯೋದ್ದೇಶದೊಂದಿಗೆ ಬಂದರು. ಅದು ನಾಲ್ಕುನೂರು ವರ್ಷಗಳ, ಋಷಿಗಳ ಪ್ರಾಜೆಕ್ಟ್. ಅವರು ತಮ್ಮ ಕಾರ್ಯೋದ್ದೇಶದಿಂದ ದೂರ ಉಳಿಯಲು ಆಗಲಿಲ್ಲ. ಕೆಲಸ ಮುಂದುವರಿಯುವುದನ್ನು ಅವರು ದೃಢಪಡಿಸಿಕೊಳ್ಳಲೇ ಬೇಕಾಗಿತ್ತು.

ಅಮರರು ತಮ್ಮ ಆಪ್ತ ಅನುಯಾಯಿ ಗುರೂಜಿಯವರಿಗೆ, ಕೆಲಸ ಮುಂದುವರೆಸಲು ತಮ್ಮ ಜೀವಿತ ಕಾಲದಲ್ಲಿ ಸಂಗ್ರಹಿಸಿದ್ದ ಎಲ್ಲ ಜ್ಞಾನವನ್ನೂ ಕೊಟ್ಟಿದ್ದರು. ಗುರೂಜಿಯವರು, ಅಮರರು ಮತ್ತು ಈ ಪ್ರಪಂಚಕ್ಕೆ ಮಧ್ಯವರ್ತಿಯಾದರು. ಅಮರರು ಬದಲಾಗುತ್ತಿರುವ ಕಾಲಕ್ಕೆ ಬೇಕಾದ ಹೊಸ ಜ್ಞಾನ ಮತ್ತು ಚೈತನ್ಯಗಳನ್ನು ಹಾಗೂ ಮಾರ್ಗದರ್ಶನವನ್ನು ಬೇರೆ ಮಟ್ಟದಿಂದ ಕೊಡಲಾರಂಭಿಸಿದರು.

ತಾವು ಪ್ರಾರಂಭಿಸಿದ ಸ್ಥಳದಲ್ಲಿ ಋಷಿಗಳ ಕೆಲಸ ಮುಂದುವರಿಯದಿದ್ದಾಗ, ಅವರು ಇನ್ನೊಂದು ಸ್ಥಳ, ಮಾನಸದಲ್ಲಿ ಗುರೂಜಿಯವರು ಎಲ್ಲವನ್ನೂ ಮೊದಲಿನಿಂದ ಪ್ರಾರಂಭಿಸುವಂತೆ ಮಾಡಿದರು. ಉದ್ದೇಶಿತ ಶಿವ–ಕೇಂದ್ರ, ಮೊದಲು ನಿಶ್ಚಯವಾಗಿದ್ದ ಸ್ಥಳದಲ್ಲಿ ಆಗದಿದ್ದಾಗ, ಅಮರರು ಅದು ಬೇರೆ ಸ್ಥಳದಲ್ಲಿ, ಮಾನಸಕ್ಕೆ ಹತ್ತಿರದ ಅಂತರ್–ಮಾನಸದಲ್ಲಿ ಸ್ಥಾಪನೆಯಾಗುವಂತೆ ಮಾಡಿದರು. ಮಾಸ್ಟರ್‌ಗಳಿಗೆ ಕೆಲಸ ಮುಂದುವರಿಯುವುದು ಮುಖ್ಯವೇ ಹೊರತು ಪೂರ್ವ ನಿಯೋಜಿತ ಯೋಜನೆ, ಜನ ಅಥವಾ ಸ್ಥಳ ಮುಖ್ಯವಲ್ಲ. ಮಾನಸ ಮತ್ತು ಅಂತರ್–ಮಾನಸದ ಪ್ರತಿಯೊಂದು ಸಾಧನೆಯ ಹಿಂದೆಯೂ ಅಮರರ ಮಾರ್ಗದರ್ಶನ, ಪ್ರೀತಿ ಮತ್ತು ಪ್ರೇರಣೆಗಳಿವೆ.

ಬಹುದೊಡ್ಡ ಮಹರ್ಷಿಯಾಗಿದ್ದರೂ, ಅವರು ಎಲ್ಲರಂತೆ ಜೀವನ ನಡೆಸಿದರು. ಅತಿ ದೊಡ್ಡ ಸತ್ಯಗಳನ್ನು ಸರಳ ಭಾಷೆಯಲ್ಲಿ ತಿಳಿಸಿದರು. ಧ್ಯಾನ ಮತ್ತು ಅಧ್ಯಾತ್ಮಿಕತೆ, ಗುಹೆಗಳಲ್ಲಿ ಮತ್ತು ಕಾಡುಗಳಲ್ಲಿ ಸಾಧನೆ ಮಾಡುವ ಕೆಲವೇ ಜನರಿಗೆ ಮಾತ್ರ ಸಾಧ್ಯ ಎಂದು ತಿಳಿದಿದ್ದ ಕಾಲದಲ್ಲಿ, ಅಮರರು ಧ್ಯಾನ ಪ್ರತಿಯೊಬ್ಬರೂ ಮನೆಯಲ್ಲಿಯೇ ಅಭ್ಯಾಸ ಮಾಡುವಂತಹುದು ಮತ್ತು ಅಧ್ಯಾತ್ಮಿಕತೆ, ಜೀವನದ ಪ್ರತಿಯೊಂದು ಚಿಕ್ಕ ಸಂದರ್ಭದಲ್ಲೂ ಪಾಲಿಸುವಂತಹುದು ಎಂದು ತೋರಿಸಿಕೊಟ್ಟರು. ಮಾಸ್ಟರ್ ಅಮರರು ಒಂದು ನಿಗೂಢ ರಹಸ್ಯ. ■

## ಪತ್ರಗಳು

**ಸಂಗ್ರಹ: ವೈಶಾಲಿಜೋಶಿ; ಅನು: ಸುಧಾಕರ್**

ನನ್ನ ಸಮಾಜದಲ್ಲಿ, ಅನೇಕ ಬಾರಿ, ವಿನಯವಂತಿಕೆ ಬಲಹೀನತೆಯ ಸೂಚನೆ ಎಂದು ನೋಡುತ್ತಾರೆ. ಆದರೆ ಇದಕ್ಕೆ ಹೊಂದಿಕೊಳ್ಳುವುದಕ್ಕಾಗಿ ನಾನು ಬದಲಾಗಲು ಸಿದ್ಧಳಿಲ್ಲ. ಪ್ರತಿಯೊಂದನ್ನೂ ವಿಶ್ವವೇ ನೋಡಿಕೊಳ್ಳುತ್ತದೆ ಮತ್ತು ಅದು ನನಗೆ ಮಾರ್ಗದರ್ಶನ ಮಾಡುತ್ತದೆ ಎಂದು ನನಗೆ ತಿಳಿದಿದೆ. ನಾನು ಸಂತೃಪ್ತಿಯಿಂದಿದ್ದೇನೆ ಮತ್ತು ನಾನು ಪಡೆಯುತ್ತಿರುವ ಎಲ್ಲಾ ಕೃಪೆಗಾಗಿ ಕೃತಜ್ಞಳಾಗಿದ್ದೇನೆ ಅವುಗಳು ಕಲಿಕೆಯ ತಿರುವುಗಳಾಗಿರಬಹುದು ಅಥವಾ ಕೊಡುಗೆಗಳಾಗಿರಬಹುದು. ನಾನು ಅತ್ಯಮೂಲ್ಯವಾದ ಪಾಠಗಳನ್ನು ಕಲಿಯುತ್ತಿದ್ದೇನೆ.

–ಜೆನಿಫ಼ರ್ ಡಯಾನೆಜ಼್

"ಅಪ್ರೀತಿ ನಮ್ಮನ್ನು ಕಬಳಿಸುತ್ತದೆ, ನಮ್ಮನ್ನು ನಾಶಮಾಡುತ್ತದೆ. ನಾವು ಪ್ರಜ್ಞಾಪೂರ್ವಕವಾಗಿ ಅಪ್ರೀತಿಯನ್ನು ನಿರಾಕರಿಸಬೇಕು" ಎಂದು ಮಾರ್ಚ್ ತಿಂಗಳ ಮಾಸಪತ್ರಿಕೆಯಲ್ಲಿ ನೀವು ಬರೆದಿರುವುದು ನನಗೆ ನಿಜವಾಗಿಯೂ ಇಷ್ಟವಾಗಿದೆ. ಇದು ಪ್ರತಿಯೊಂದರ ತಳಹದಿಯಾಗಿದೆ. ನನ್ನಲ್ಲಿ ಯಾವುದೇ ನಕಾರಾತ್ಮಕತೆ ಇಲ್ಲ ಎಂದು ಖಾತ್ರಿಪಡಿಸಿಕೊಳ್ಳುವುದಕ್ಕಾಗಿ ನನ್ನನ್ನು ನಾನು ಪರೀಕ್ಷಿಸಿಕೊಳ್ಳಲು ಮತ್ತು ಅತ್ಯಲ್ಪ ಅಪ್ರೀತಿ ಕೂಡಾ ವಿಕೃತಿಯನ್ನುಂಟುಮಾಡುವುದರಿಂದ ಅದನ್ನು ಹೋಗಲಾಡಿಸಲು ನನಗೆ ಸ್ಫೂರ್ತಿಯುಂಟಾಗಿದೆ. ಇದು ಪ್ರತಿಯೊಂದು ಕ್ಷಣವೂ ಒಂದು ಬೋನಸ್ ಎಂದು ನಾನು ಅರಿತುಕೊಳ್ಳುವಂತೆ ಮಾಡಿದೆ.

–ಲಿಂಡಾ ಸಾಯರ್

'ಆತ್ಮದ ಮಟ್ಟ' ಪದವನ್ನು ನೀವು ಯಾವ ಅರ್ಥದಲ್ಲಿ ಹೇಳುತ್ತಿದ್ದೀರಿ ಎಂಬುದನ್ನು ನಾನು ತಪೋನಗರಕ್ಕೆ ಬರುವುದಕ್ಕೆ ಪ್ರಾರಂಭಿಸಿದ ನಂತರ ಅರಿತುಕೊಳ್ಳುತ್ತಿದ್ದೇನೆ. ನನಗೆ ದುಃಖವಾದಾಗಲೆಲ್ಲ ನನ್ನ ಪ್ರಜ್ಞೆಯನ್ನು ಬೆಳಕಿನ ಕಡೆಗೆ ಸ್ಥಳಾಂತರಿಸುತ್ತೇನೆ. ಆಗ ದುಃಖ ಮಾಯವಾಗುತ್ತದೆ. ನಿಮ್ಮನ್ನು ಗುರುವಾಗಿ ಪಡೆದಿರುವುದಕ್ಕೆ ನಾನು ಧನ್ಯಳಾಗಿದ್ದೇನೆ.

–ಲಿನ್ ಕರಾಟನಿ

ನಾನು ಈ ಮಾರ್ಗದಲ್ಲಿ ಕಳೆದ ಆರು ತಿಂಗಳಿನಿಂದ ಧ್ಯಾನ ಮಾಡುತ್ತಿದ್ದೇನೆ. ಪ್ರತಿಯೊಂದು ಪುಸ್ತಕವನ್ನು ಓದಿದಾಗಲೂ ಒಂದೊಂದು ವಿಶೇಷತೆಯನ್ನು ಕಂಡಿದ್ದೇನೆ. ಪ್ರತಿಯೊಂದು ಪುಸ್ತಕವೂ ನನ್ನ ಕುತೂಹಲಕ್ಕೆ, ಸರಿಯಾದ ಸಮಯದಲ್ಲಿ ಉತ್ತರವೆಂದು ಸಾಬೀತಾಗಿದೆ.

–ನೇಹಾ ರಾಜನಾಲ

## ಪ್ರಶ್ನೆಗಳು ಮತ್ತು ಉತ್ತರಗಳು

**(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)**

**ಪ್ರ: ಸಮೃದ್ಧಿ ಎಂದರೇನು?**

ಉ: ಸಮೃದ್ಧಿ ಎಂದರೆ ಆತ್ಮದ ಮತ್ತು ಹೃದಯದ ಶ್ರೀಮಂತಿಕೆಯಾಗಿದೆ. ಅದು ನಾವು ಹೊಂದಿರುವ ಬೆಳಕಿನ ಮತ್ತು ನಾವು ವ್ಯಕ್ತಪಡಿಸುವ ಪ್ರೀತಿಯ ಶ್ರೀಮಂತಿಕೆಯಾಗಿದೆ.

**ಪ್ರ: ನಾವು ನಮ್ಮ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು ಹೇಗೆ?**

ಉ: ಪ್ರಜ್ಞೆಯನ್ನು ಬೆಳೆಸಿಕೊಳ್ಳಲಾಗುವುದಿಲ್ಲ, ಅದನ್ನು ವಿಸ್ತಾರಗೊಳಿಸಬಹುದು.

**ಪ್ರ: ನಾವು ಕಠಿಣ ಸನ್ನಿವೇಶಗಳನ್ನು ಒಪ್ಪಿಕೊಳ್ಳುವುದು ಹೇಗೆ?**

ಉ: ಪ್ರತಿಯೊಬ್ಬರೂ ಅವರದೇ ಆದ ಮಾರ್ಗಗಳನ್ನು ಸೃಷ್ಟಿಸುತ್ತಾರೆ. ನಾವು ಕಠಿಣ ಸನ್ನಿವೇಶಗಳಿಂದ ಹೊರಬರುವ ಪ್ರಯತ್ನ ಮಾಡಿದರೆ, ದೇವರು ನಮಗೆ ಆತನ ಶಕ್ತಿ, ವಿವೇಕದೊಂದಿಗೆ ಶ್ರುತಿಗೊಳ್ಳಲು ಸಹಾಯ ಮಾಡುತ್ತಾನೆ ಮತ್ತು ಅಲ್ಲಿ ಯಾವಾಗಲೂ ಪರಿಹಾರೋಪಾಯವಿರುತ್ತದೆ.

**ಪ್ರ: ಧ್ಯಾನದ ಗುಣಮಟ್ಟದಲ್ಲಿ ಏಕೆ ಏರುಪೇರಾಗುತ್ತದೆ?**

ಉ: ಎಲ್ಲವೂ ಏರುಪೇರು ಆಗುವ ಪ್ರಪಂಚದಲ್ಲಿ ನಾವು ಬದುಕುತ್ತಿದ್ದೇವೆ. ನಮ್ಮ ಧ್ಯಾನದ ಮೇಲೆ ಈ ಏರುಪೇರುಗಳಲ್ಲದೆ ಇನ್ನೂ ಹಲವು ಅಜ್ಞಾತ ಅಂಶಗಳಂತಹ ನಮ್ಮ ಮನಃಸ್ಥಿತಿ, ನಮ್ಮ ಪ್ರಾಮಾಣಿಕತೆ ಮತ್ತು ಪ್ರಯತ್ನಗಳು ಪರಿಣಾಮ ಬೀರುತ್ತವೆ.

**ಪ್ರ: ಒಬ್ಬ ಉತ್ತಮ ವ್ಯಕ್ತಿಯೂ ಧ್ಯಾನವನ್ನು ಪ್ರಾರಂಭಿಸಬೇಕೇ?**

ಉ: ಅದು ವ್ಯಕ್ತಿಯ ಒಳ್ಳೆತನ ಮತ್ತು ಪರಿಶುದ್ಧತೆಯ ಮಟ್ಟವನ್ನು ಅವಲಂಬಿಸಿದೆ. ಆ ಗುಣಮಟ್ಟವನ್ನು ಬೇರೊಬ್ಬರು ನಿರ್ಧರಿಸಬೇಕು. ಆತನ ಶುದ್ಧತೆಯ ಮಟ್ಟ ಉನ್ನತವಾಗಿದ್ದರೆ, ಆತ ಧ್ಯಾನ ಮಾಡದೆಯೂ ಕೆಲವು ಪ್ರಕ್ರಿಯೆಗಳು ಸಂಭವಿಸುತ್ತವೆ. ಆದರೆ ಆತನ ಶುದ್ಧತೆ ಕೆಳಮಟ್ಟದಲ್ಲಿದ್ದರೆ, ಆತ ಧ್ಯಾನ ಮಾಡಲೇಬೇಕು ಮತ್ತು ಎಲ್ಲ ತಂತ್ರಗಳನ್ನೂ ಅಭ್ಯಾಸ ಮಾಡಬೇಕು.

**ಪ್ರ: ನಾವು ಏಕೆ ಧ್ಯಾನ ಮಾಡಬೇಕು?**

ಉ: ನಾವು ಈ ಬದುಕನ್ನು ಸಂಪೂರ್ಣವಾಗಿ, ಶಾಂತಿಯುತವಾಗಿ ಮತ್ತು ವಿವೇಕಯುತವಾಗಿ ಬದುಕಲು ಧ್ಯಾನವನ್ನು ಮಾಡಬೇಕು. ಅಂತಿಮವಾಗಿ ಸ್ವಾತಂತ್ರ್ಯ ಪಡೆಯಲು, ಬೆಳಕಾಗಲು ಮತ್ತು ದೇವರೆಡೆಗೆ ಹಿಂದಿರುಗಲು.

**ಪ್ರ: ಸಮಯವನ್ನು ಏಕೆ ಕುಗ್ಗಿಸಲಾಗಿದೆ?**

ಉ: ನಾವು ಪ್ರಳಯ ಕಾಲದ ನೋವು ಮತ್ತು ಸಂಘರ್ಷಣೆಗಳನ್ನು ಶೀಘ್ರವಾಗಿ ದಾಟಲು ಸಾಧ್ಯವಾಗುವಂತೆ ಋಷಿಗಳು ನಮ್ಮ ಮೇಲಿನ ಪ್ರೀತಿಯಿಂದ ಸಮಯವನ್ನು ಕುಗ್ಗಿಸಿದ್ದಾರೆ.

**ಪ್ರ: ಇದು ಈ ಹಿಂದೆ ಸಂಭವಿಸಿತ್ತೇ?**

ಉ: ಹೌದು. ಇದೇ ಮೊದಲಲ್ಲ.

**ಪ್ರ: ನಾವು ಋಷಿಗಳ ಕೆಲಸ ಮಾಡಲು ಆಯ್ಕೆ ಮಾಡಿಕೊಂಡಮೇಲೆ ಹಿಂದಕ್ಕೆ ಸರಿಯಬಹುದೇ?**

ಉ: ಹೌದು. ನಮಗೆ ಯಾವಾಗಲೂ ಇಚ್ಛಾಸ್ವಾತಂತ್ರ್ಯವಿದೆ. ನಾವು ಹಿಂದೆ ಸರಿಯಬಹುದು.

**ಪ್ರ: ನಾವು ಇದಕ್ಕೆ ಕರ್ಮಗಳನ್ನು ಆಕರ್ಷಿಸುತ್ತೇವೆಯೇ?**

ಉ: ಇಲ್ಲ.

**ಪ್ರ: ನಮ್ಮ ದೇಹಗಳು ಹೇಗೆ ಬೆಳಕಿನ ದೇಹಗಳಾಗುತ್ತವೆ?**

ಉ: ನಾವು ಬೆಳಕನ್ನು ಒಳಗೆ ತೆಗೆದುಕೊಂಡಾಗ, ಬೆಳಕು ನಮ್ಮ ದೇಹದ ಪ್ರತಿಯೊಂದು ಕಣವನ್ನೂ ಸೇರುತ್ತದೆ. ಪ್ರತಿಯೊಂದು ಕಣವೂ ಶುದ್ಧವಾಗುತ್ತದೆ ಮತ್ತು ಪ್ರತಿ ಕಣವೂ ಬೆಳಕಾಗುತ್ತದೆ. ಕ್ರಮೇಣ ಇಡೀ ದೇಹ ಬೆಳಕಿನ ದೇಹವಾಗುತ್ತದೆ.

**ಪ್ರ: ನಾನು ಬೆಳಕನ್ನು ಚಾನಲ್ ಮಾಡಿದರೆ ನನಗೂ ಹೀಲ್ ಆಗುತ್ತದೆಯೇ?**

ಉ: ನಾವು ಬೆಳಕನ್ನು ಚಾನಲ್ ಮಾಡಿದಾಗ ಹಲವು ಪ್ರಕ್ರಿಯೆಗಳು ಉಂಟಾಗುತ್ತವೆ. ಆಗ ತನಗೆ ತಾನಾಗಿಯೇ ಹೀಲಿಂಗ್ ಆಗುತ್ತದೆ.

**ಪ್ರ: ಈಗ ಬಹಳಷ್ಟು ಹೊಸ ಚೈತನ್ಯಗಳನ್ನು ಪಡೆದು, ಅವನ್ನು ಚಾನಲ್ ಮಾಡಲಾಗುತ್ತಿದೆ. ಇದರ ಪರಿಣಾಮಗಳೇನು?**

ಉ: ಎಲ್ಲಾ ಕಡೆಗಳಲ್ಲಿ ಒಂದು ತರಹದ ಜಾಗೃತಿ ಉಂಟಾಗುತ್ತಿದೆ. ಅನ್ಯಾಯ, ಭ್ರಷ್ಟತೆ, ಹಿಂಸೆಗಳ ಬಗ್ಗೆ ಒಂದು ತರಹದ ಅಸಹನೆ ವ್ಯಕ್ತವಾಗುತ್ತಿದೆ. ನಮ್ಮಲ್ಲಿ ಮತ್ತು ಈ ಪ್ರಪಂಚದಲ್ಲಿರುವ ಕುಂದುಕೊರತೆಗಳ ಬಗ್ಗೆ ಜಾಗೃತಿ ಉಂಟಾಗಿದೆ. ನಾವು ಬದಲಾಗಬೇಕು, ಈ ಪ್ರಪಂಚ ಬದಲಾಗಬೇಕು ಎಂಬ ಅರಿವು ಮೂಡಿದೆ. ಹೊಸ ಚೈತನ್ಯಗಳು ನಿಜವಾಗಿಯೂ ಕೆಲಸಮಾಡುತ್ತಿವೆ.

**ಪ್ರ: ಆಧ್ಯಾತ್ಮಿಕ ಅನುಭವಗಳನ್ನು ವಿನಿಮಯ ಮಾಡಿಕೊಳ್ಳುವುದು ತಪ್ಪೇ?**

ಉ: ನಾನು ತಪ್ಪೆಂದು ಹೇಳುವುದಿಲ್ಲ. ಆದರೆ ಈ ತರಹದ ವಿನಿಮಯಗಳನ್ನು ಮತ್ತು ಚರ್ಚೆಗಳನ್ನು ಮಾಡದಿರುವುದು ಒಳ್ಳೆಯದು. ಇದರಿಂದ ಕೆಲವೊಮ್ಮೆ ಬೇರೆಯವರು ಗೊಂದಲಕ್ಕೆ ಒಳಗಾಗುತ್ತಾರೆ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Beyond 2012 | 80/- |
| 2012 - End or Beginning | 100/- |
| iGuruji - Vol 1 | 150/- |
| iGuruji - Vol 2 | 120/- |
| Living in the Light of My Guru | 220/- |
| A Package from the Rishis | 250/- |
| (containing 5 Booklets) | |
| - How to Meditate - Dhyana Yoga | |
| - Descent of Soul | |
| - Practising Shambala Principles | |
| - Astral Ventures of A Modern Rishi | |
| The Masters Answer | 120/- |
| Channelled Knowledge from the Rishis | 250/- |
| Channelled Knowledge from the Rishis Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಋಷಿಗಳಿಂದ ಬಂದ ಕೊಡುಗೆ | 250/- |
| (ಐದು ಪುಸ್ತಕಗಳು) | |
| – ಧ್ಯಾನ ಮಾಡುವುದು ಹೇಗೆ – ಧ್ಯಾನ ಯೋಗ | |
| – ಆತ್ಮದ ಅವರೋಹಣ –ಶಂಬಲ ನಿಯಮಗಳ ಅಭ್ಯಾಸ | |
| – ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे | |
| सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| २०१२ नंतर (Marathi) | 80/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| ஒளியில் வாழ்க்கை | 10/- |
| ஒளி | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతి | 10/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



**ಗುರೂಜಿ ಕೃಷ್ಣಾನಂದ (1939)**

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಲೈಟ್ ಚಾನಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 10 ರಿಂದ 1 ರವರೆಗೆ ಗುರೂಜಿಯುವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ.ರಾವ್; ಅನು: ಸ್ವರ್ಣಲತ)

ಫೋಟಾನ್ ಬೆಲ್ಟ್ ನನ್ನ ಪತಿಯ ಬಗ್ಗೆ ನನಗಿದ್ದ ಕಾಳಜಿಯನ್ನುದ್ದೇಶಿಸಿ, "ನಿನ್ನ ಪತಿಯ ಕಣ್ಣುಗಳು ಸರಿಹೋಗುತ್ತವೆ" ಎಂದಿತು, ಹಾಗೂ "ನಿನ್ನ ಹೃದಯ ಬೇನೆಯೂ ವಾಸಿಯಾಗುವುದು" ಎಂದು ಹೇಳಿತು. ನಾನು ಫೋಟಾನ್ ಬೆಲ್ಟ್ ಕಡೆಗೆ ನೋಡಿದಾಗ, ಬುದ್ಧ ಅದರಲ್ಲಿ ಒಂದಾಗಿರುವುದನ್ನು ಕಂಡೆ.

–ಇಕುಕೊ

ಧ್ಯಾನದ ನಂತರ ಇಡೀ ದಿನವನ್ನು ನಾನು ಧ್ಯಾನದ ಸ್ಥಿತಿಯಲ್ಲೇ ಕಳೆಯುತ್ತೇನೆ. ಕೆಲವು ಬಾರಿ ಬೆಳಕು ಮತ್ತು ಶಾಂತಿ ನನ್ನ ಶರೀರವನ್ನೆಲ್ಲ ವ್ಯಾಪಿಸಿ, ಎಲ್ಲ ಕಡೆ ಹರಡುವ ಅನುಭವವಾಗುತ್ತದೆ. ನಾನು ದೈವಿಕ ಶಾಂತಿ, ಬೆಳಕು ಮತ್ತು ಆನಂದ ಪರವಶತೆಯಿಂದ ಯಾವಾಗಲೂ ತುಂಬಿರುತ್ತೇನೆ. ನನ್ನ ಸಹಸ್ರಾರ ಚಕ್ರದಿಂದ ಬೆಳಕು ಚಿನ್ನದ ಸಣ್ಣಸಣ್ಣ ಗೋಳಗಳಾಗಿ ಕೆಳಗೆ ಇಳಿದು ಬಂದು, ನನ್ನ ಎಲ್ಲ ಕೋಶಗಳಲ್ಲೂ ಹರಡಿ ನನ್ನನ್ನು ಹೆಚ್ಚು ಶಾಂತಿ ಮತ್ತು ಪ್ರೀತಿಪಾತ್ರನನ್ನಾಗಿಸುತ್ತದೆ.

–ರಜನೀಶ್ ದೇಶ್‌ಪಾಂಡೆ

ಧ್ಯಾನದ ಸಮಯದಲ್ಲಿ ಬೆಳಕನ್ನು ಅನುಭವಿಸುವ ಪ್ರಯತ್ನದಲ್ಲಿದ್ದಾಗ ನನ್ನ ದೇಹ ಬೆಳಕಾಗಿ, ಒಳಗಿನಿಂದ ವಿಸ್ತರಿಸಲು ಶುರುವಾಯಿತು. ನಾನು ಬೆಳಕಿನ ಅನಂತಮೂಲದೆಡೆಗೆ ಸೆಳೆಯಲ್ಪಟ್ಟೆ. ಈ ಅನುಭವದ ನಂತರ ನನಗೆ ಎಂದೂ ದಣಿವಾಗೇ ಇಲ್ಲವೇನೋ ಎಂಬಷ್ಟು ಲವಲವಿಕೆ ನನ್ನಲ್ಲಿ ಮೂಡಿದೆ.

–ಪ್ರಿಯಂವದಾ ಗೋಡ್ಸೆ

ಒಮ್ಮೆ ನಾನು ಧ್ಯಾನದಲ್ಲಿ ಭೂಮಿ, ಸೂರ್ಯ, ಆಲ್ಸಿಯೋನ್, ಸಿರಿಯಸ್, ನಕ್ಷತ್ರಪುಂಜಗಳು ಹಾಗೂ ಬಿಳಿಯ ರಂಧ್ರಗಳನ್ನು ಒಳಗೊಂಡಿದ್ದ ಒಂದು ಅಗಾಧವಾದ ಬೆಳಕಿನ ಕಂಬ, ಭೂಮಿ ಮತ್ತು ಮಾನವರನ್ನು ಅಪ್ಪಿ ಹಿಡಿದಿದ್ದ ಒಂದು ಚಿತ್ರಣವನ್ನು ಕಂಡೆ. 'ರಾ' ಚೈತನ್ಯಗಳ ನೆರವಿನಿಂದ ಆ ಬೆಳಕಿನ ಕಂಬ ಫೋಟಾನ್ ಬೆಲ್ಟ್‌ನೊಡಗೂಡಿ ಒಂದು ಬೃಹತ್ತಾದ ಶಿಲುಬೆಯನ್ನುಂಟುಮಾಡಿ, ನಮ್ಮ ಭೂಮಿ ಹಾಗೂ ಮಾನವರೆಲ್ಲರನ್ನು ಶಿಲುಬೆಯ ಮಧ್ಯಕ್ಕೆ ಸೆಳೆದು ರಕ್ಷಿಸುತ್ತಿತ್ತು. ಧ್ಯಾನದ ಸಮಯದಲ್ಲಿ ನಾನು ಈಗ ಆ ಬೆಳಕಿನ ಶಿಲುಬೆಯಿಂದ ಚೈತನ್ಯಗಳನ್ನು ಪಡೆದು, ಸ್ವಲ್ಪವೂ ಕಷ್ಟವಿಲ್ಲದೆ ನನ್ನ ಎದೆಯಲ್ಲಿರುವ ಬೆಳಕನ್ನು ಹರಡಬಲ್ಲೆ ಮತ್ತು ಈಗ ನಾನು ಯಾವಾಗಲೂ ಆನಂದದಿಂದ ತುಂಬಿರುತ್ತೇನೆ.

–ಯಾಸೂಜಿ ಯಾಮಾಗೂಚಿ

2-5-2010ರಂದು ನನಗೆ ಒಂದು ಸೂಕ್ಷ್ಮನೆಲೆಯ ತರಗತಿಯ ಮಿನುಗುದರ್ಶನವಾಯಿತು. ಅದರಲ್ಲಿ ಅನೇಕ ವಾಲಂಟಿಯರ್‌ಗಳು ಹಾಗೂ ಕೆಲವು ತಪೋನಗರ ನಿವಾಸಿಗಳು ಗುರೂಜಿಯವರ ಸುತ್ತ ಕುಳಿತಿದ್ದರು. ಆ ಗುಂಪಿನಲ್ಲಿದ್ದವರನ್ನು ಪರೀಕ್ಷಿಸಲು ಹಾಗೂ ಅವರನ್ನು ಹೇಗೆ ಇನ್ನೂ ಅಭಿವೃದ್ಧಿಪಡಿಸಬಹುದು ಮತ್ತು ಪುನರ್-ಸಂಘಟಿಸಬಹುದು ಎಂಬುದರ ಬಗ್ಗೆ ತಿಳಿಯಲು ಈ ಸಭೆ ಸೇರಿತ್ತು ಎಂದು ನನಗೆ ತಿಳಿಸಲಾಯಿತು.

ಬುದ್ಧಪೂರ್ಣಿಮೆಯ ದಿನ ನನ್ನ ಧ್ಯಾನ ಅತ್ಯಂತ ರೋಮಾಂಚಕಾರಿಯಾಗಿತ್ತು. ನಾನು ಬುದ್ಧನೊಳಗೆ ಪ್ರವೇಶಿಸಿದಾಗ ಆ ಬೆಳಕಿನಲ್ಲಿ ಕರಗಿಹೋದೆ ಮತ್ತು ಕೆಲವು ನಿಮಿಷಗಳವರೆಗೆ ನಾನೇ ಬೆಳಕಾಗಿದ್ದೆ. ಆ ಸಮಯದಲ್ಲಿ, ಭಗವಂತ ಕಲ್ಕಿ ಚಿನ್ನದ ಸಿಂಹಾಸನದಲ್ಲಿ ಕುಳಿತಿದ್ದುದನ್ನು ನಾನು ಕಂಡೆ. ಸ್ವಲ್ಪ ಸಮಯದ ನಂತರ ಒಂದು ಸುರಂಗಮಾರ್ಗದಲ್ಲಿ ನಡೆಯುತ್ತಿದ್ದೆ. ನಾನು ಮುಂದೆ ಹೋದಂತೆ ನನ್ನ ಧ್ಯಾನ ಹೆಚ್ಚುಹೆಚ್ಚು ಆಳವಾಗುತ್ತ ಹೋಯಿತು. ಸುರಂಗದ ಕೊನೆಯಲ್ಲಿ ಒಂದು ಪ್ರಕಾಶಮಾನವಾದ ಬೆಳಕನ್ನು ಕಂಡೆ. ನಾನು ನನ್ನೊಳಗೇ ಅಂತರ್-ಪ್ರಯಾಣ ಮಾಡಿದೆ ಎಂದೆನಿಸಿತು.

–ಮನೋಜ್ ಚೋಪ್ರಾ

ಬುದ್ಧಪೂರ್ಣಿಮೆಯಂದು ನನ್ನ ಧ್ಯಾನ ಬಹಳ ಆಳವಾಗಿತ್ತು. ಜಾಗೃತಿಯ ಸಾಗರದ ಅಲೆಗಳಲ್ಲಿ ನಾನು ಈಜುತ್ತಿದ್ದೆ. ಅಂದಿನಿಂದ ನನ್ನ ಅಭಿವೃದ್ಧಿಯಲ್ಲಿ ಒಂದು ದೊಡ್ಡ ಪ್ರೇರೇಪಣೆಯಾಗಿ ನಾನು ದೈವೀಕಳಾಗುತ್ತಿದ್ದೇನೆ. ಅಂದು ರಾತ್ರಿ ಭಗವಂತ ನನ್ನೊಳಗಿನ ನಿರ್ಮಲತ್ವವನ್ನು ತೋರಿಸಿದಂತೆನಿಸಿತು. ಅದು ನನ್ನ ಹತ್ತಿರ ಬರುವ ಎಲ್ಲರಿಗೂ ಹರಡುತ್ತದೆ. ಆ ನಿರ್ಮಲತೆ ವಿಭೂತಿಯ ರೂಪದಲ್ಲಿ ಬಂತು. ನನ್ನೊಳಗಿನಿಂದ ಸುತ್ತಲಿದ್ದ ಎಲ್ಲರಿಗೆ ಹರಡಿತು. ವಿಭೂತಿಗೂ ಜಾಗೃತಿಗೂ ವ್ಯತ್ಯಾಸವೇ ಇರಲಿಲ್ಲ.

–ವಿದ್ಯಾ ವಿಶ್ವಾಮಿತ್ರ

ಧ್ಯಾನವನ್ನು ಪ್ರಾರಂಭಿಸಿದ ಕೆಲವು ನಿಮಿಷಗಳ ನಂತರ ಬೆಳಕು ನನ್ನಿಂದ ಹೊರಬರುತ್ತಿರುವ ಅನುಭವವಾಗುತ್ತದೆ. ಆಜ್ಞಾಚಕ್ರವಿರುವ ಜಾಗದಲ್ಲಿ ಚೈತನ್ಯದ ಅಲೆಗಳು ಉದ್ಭವಿಸುತ್ತವೆ. ಆಗ ನನ್ನ ಸಹಸ್ರಾರ ಚಕ್ರದಿಂದ ಹಿಡಿದು ಇಡೀ ದೇಹದಲ್ಲೆಲ್ಲಾ ಕಂಪನಗಳ ಅನುಭವವಾಗುತ್ತದೆ.

–ಜೆನ್ನಿಫರ್ ಡಯಾನೆಜ಼್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು - 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ